ಸಂಪುಟ : 8 ಸಂಚಿಕೆ : 266 ಪುಟ : 4 ಬೆಲೆ : 3.00 ಶುಕ್ರವಾರ ಡಿಸೆಂಬರ್ 1, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 266 Pages : 4 Price : 3.00 Friday December 1, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಕಲ್ಲಂಗಡಿ ಹಣ್ಣಿನ ಬೆಳೆ ಕ್ಷೇತ್ರೋತ್ಸವದಲ್ಲಿ ರೈತರು ಭಾಗವಹಿಸಲು ಕರೆ

■ ವಿಜಯಸಾಕ್ಷಿ ಸುದ್ದಿ, ಗದಗ

2023–24ನೇ ಸಾಲಿನ ಪ್ರಚಾರ ಮತ್ತು ಸಾಹಿತ್ಯ ಯೋಜನೆಯಡಿ ಕಲ್ಲಂಗಡಿ ಬೆಳೆ ಕ್ಷೇತ್ರೋತ್ಸವವನ್ನು ಡಿಸೆಂಬರ್ 2 ರಂದು ಬೆಳಿಗ್ಗೆ 10.30ಘಂಟೆಗೆ ಲಕ್ಷ್ಮೇಶ್ವರ ತಾಲೂಕಿನ ಅಡರಕಟ್ಟಿ ಹದ್ದಿನಲ್ಲಿ ಬರುವ ಶ್ಯಾಬಳ ರಸ್ತೆಗೆ ಹೊಂದಿಕೊಂಡಿರುವ ಗಡ್ಡೆದೇವರಮಠ ನಗರ ರಸ್ತೆಯಲ್ಲಿರುವ ಬಸವರಾಜ ಮರಿಬಸಪ್ಪ ಶಿರಹಟ್ಟಿ ಇವರ ಕಲ್ಲಂಗಡಿ ಬೆಳೆ ತೋಟದಲ್ಲಿ ಇಸ್ರೇಲ್ ಮಾದರಿಯಲ್ಲಿ ಕಲ್ಲಂಗಡಿ ಬೆಳೆ ಅಭಿವೃದ್ಧಿಪಡಿಸಿದ್ದು, ಕ್ಷೇತ್ರೋತ್ಸವವನ್ನು ಹಮ್ಮಿಕೊಳ್ಳಲಾಗುವುದು.

ಕಲ್ಲಂಗಡಿ ಹಣ್ಣಿನ ಬೆಳೆ, ಅಲ್ಪಾವಧಿ ಬೆಳೆಯಾಗಿದ್ದು, ಕೇವಲ 65–70 ದಿನಗಳಲ್ಲಿ ಬರುವ ಬೆಳೆಯಾಗಿದೆ. ಬಸವರಾಜ ಬಸಪ್ಪ ಶಿರಹಟ್ಟಿ ಅವರು ಇಸ್ರೇಲ್ ಕಲ್ಲಂಗಡಿ ಬೆಳೆಸಿದ್ದು, ಉತ್ತಮ ಇಳುವರಿ ನೀರಿಕ್ಷೆಯಲ್ಲಿದ್ದಾರೆ. ಏರು ಮಡಿ ಮಾಡಿ ಹನಿ ನೀರಾವರಿ ಪದ್ದತಿ ಅಳವಡಿಸಿ, ಪ್ಲಾಸ್ಟಿಕ್ ಮಲ್ಚಿಂಗ್ ಸೀಟ್ ಹೊದಿಸಿ, ಕಲ್ಲಂಗಡಿ ಸಸಿಗಳನ್ನು ನಾಟಿ ಮಾಡಿದ್ದಾರೆ. ಸಾವಯುವ ಗೊಬ್ಬರ, ಲಘು ಪೋಷಕಾಂಶಗಳ ಮಿಶ್ರಣವನ್ನು ಮಣ್ಣಿನಲ್ಲಿ ಬೆರೆಸಿ, ಪೌಸ್ಟಿಕ ಯುಕ್ತವಾಗಿ ಮಾಡಿದ್ದಾರೆ. ಹನಿ ನೀರಾವರಿ ಮೂಲಕ ರಸ್ತಾವರಿ ಪದ್ಧತಿ ಅಳವಡಿಸಿ ಇದರ ಮೂಲಕ ಪ್ರಧಾನ ಲಘುಪೋಷಕಾಂಶಗಳನ್ನು ನೀಡುತ್ತಿದ್ದಾರೆ.

ಒಟ್ಟು 4 ಎಕರೆ ಕ್ಷೇತ್ರದಲ್ಲಿ ಬೆಳೆದ ಕಲ್ಲಂಗಡಿಯಿಂದ ಅಧಿಕ ಇಳುವರಿ ಪಡೆಯುವ ನಿರೀಕ್ಷೆಯಲ್ಲಿದ್ದಾರೆ. ಇಸ್ರೇಲ್ ಮಾದರಿಯಲ್ಲಿ ಬೆಳೆದ ಕಲ್ಲಂಗಡಿ ಬೆಳೆ ಕ್ಷೇತ್ರೋತ್ಸವದಲ್ಲಿ ರೈತರು ಭಾಗವಹಿಸಿ, ಇದರ ಲಾಭ ಪಡೆದುಕೊಳ್ಳಲು ಶಿರಹಟ್ಟಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಸುರೇಶ ಕುಂಬಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ

# ಕಾಂಗ್ರೆಸ್ ಸರ್ಕಾರ ಜಾತಿ–ಜಾತಿಗಳ ನಡುವೆ ಬೆಂಕಿ ಹಚ್ಚುತ್ತಿದೆ

■ ವಿಜಯಸಾಕ್ಷಿ ಸುದ್ದಿ, ಗದಗ

ಡಿ.ಕೆ. ಶಿವಕುಮಾರ್ ಅವರ ಮನೆಯ ಮೇಲೆ ಸಿಬಿಐ ದಾಳಿ ಮಾಡಿದ ಸಂದರ್ಭದಲ್ಲಿ ಅಕ್ರಮವಾಗಿ ಸಂಗ್ರಹಿಸಿದ್ದ ನೂರಾರು ಕೋಟಿ ರೂ ಕಂತೆ ಕಂತೆ ಹಣ ಸಿಕ್ಕಿತ್ತು. ಪೆಟ್ಟಿಗಳ ತುಂಬ ಅಕ್ರಮ ದಾಖಲೆಗಳು ಸಿಕ್ಕಿದ್ದವು. ಈಗ ಶೇ.90ರಷ್ಟು ತನಿಖೆ ಮುಗಿದು, ಚಾರ್ಜ್‌ಶೀಟ್ ಸಲ್ಲಿಸುವ ಸಂದರ್ಭದಲ್ಲಿ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಅವರು ಒತ್ತಡ ಹಾಕಿ ಕೇಸ್ ಖುಲಾಸೆಗೊಳಿಸಿದ್ದಾರೆ. ಡಿಕೆಶಿಗೆ ತಾತ್ಕಾಲಿಕ ರಿಲೀಫ್ ಸಿಕ್ಕಿದೆಯಾದರೂ, ಅಧಿವೇಶನ ಮುಗಿದ ಮೇಲಾದರೂ ಚಾರ್ಜ್‌ಶೀಟ್ ಸಲ್ಲಿಕೆಯಾಗಿ, ಡಿಕೆಶಿ ಜೈಲಿಗೆ ಹೋಗುವುದು ನಿಶ್ಚಿತ ಎಂದು ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ಧರಾಮಯ್ಯ ಪ್ರತಿಯೊಂದಕ್ಕೂ ಸುಳ್ಳು ಹೇಳುತ್ತಾರೆ. ಎಲ್ಲರ ಬಗ್ಗೆಯೂ ಹಗುರವಾಗಿ ಮಾತನಾಡುತ್ತಾರೆ. ನಮಗೂ ಹಾಗೆ ಮಾತನಾಡಲು ಬರಲ್ವಾ? ಮುಖ್ಯಮಂತ್ರಿ ಸ್ಥಾನದಲ್ಲಿ ಕೂರುವ ಯೋಗ್ಯತೆ ಇಲ್ಲದಿದ್ದರೆ ರಾಜೀನಾಮೆ ಕೊಟ್ಟು ಮನೆಗೆ ಹೋಗಬೇಕು. ಸ್ಪೀಕರ್ ಸ್ಥಾನಕ್ಕೆ ಕನಿಷ್ಠ ಗೌರವ ಕೊಡಬೇಕು ಎಂಬ ಅಂದಾಜಿಲ್ಲದ ಜಮೀರ್ ಅಹ್ಮದ್ ಖಾನ್‌ರನ್ನು ಇನ್ನೂ ಕ್ಯಾಬಿನೆಟ್‌ನಲ್ಲಿ ಇಟ್ಟುಕೊಂಡಿದ್ದಾರೆ ಎಂದು ಹರಿಹಾಯ್ದರು.

ಸಿಎಂ ಪುತ್ರ ಯತೀಂದ್ರ ಸಿದ್ದರಾಮಯ್ಯ ಅವರ ಆಡಿಯೋ ವಿಚಾರವಾಗಿ ಪ್ರತಿಕ್ರಿಯಿಸಿದ ಈಶ್ವರಪ್ಪ, ಸಭೆಯಲ್ಲಿ 'ಹಲೋ ಅಪ್ಪಾ... ಎಂದು ಹೇಳಿದ್ದು ಭ್ರಷ್ಟಾಚಾರ ಅಲ್ಲವಾ? ಸಿದ್ದರಾಮಯ್ಯ ಇದೊಂದೇ ಪ್ರಕರಣವನ್ನು ನ್ಯಾಯಾಂಗ ತನಿಖೆ ಮಾಡಿಸಲಿ, ಸಿಎಸ್‌ಆರ್ ಫಂಡ್ ವಿಚಾರ ಹೊರಬೀಳುತ್ತದೆ ಎಂದರಲ್ಲದೆ,

▸▸ 3 ನೇ ಪುಟಕ್ಕೆ

> ಜಾತಿ ಜನಗಣತಿ ವಿಚಾರವಾಗಿ ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಈಶ್ವರಪ್ಪ, ಜಾತಿ ಗಣತಿಯ ವರದಿಯನ್ನು ಯಾವ ದಿನ ಬಿಡುಗಡೆ ಮಾಡುತ್ತಾರೋ, ಆ ದಿನವೇ ಸಿದ್ದರಾಮಯ್ಯರ ಅಧಿಕಾರಾವಧಿ ಮುಗಿದು ಖುರ್ಚಿಯಿಂದ ಕೆಳಗಿಳಿಯುತ್ತಾರೆ. ಒಂಬತ್ತು ವರ್ಷದಿಂದ ಜಾತಿ ಗಣತಿಯ ವಿಚಾರ ಹೇಳುತ್ತಲೇ ಬಂದಿದ್ದಾರೆ. ಯಾವಾಗ ಜಾತಿ ಜನಗಣತಿ ಬಿಡುಗಡೆ ಮಾಡುತ್ತೀರಿ ಎಂದು ವಿಧಾನ ಪರಿಷತ್‌ನಲ್ಲಿ ನಾನೇ ಹತ್ತಾರು ಬಾರಿ ಕೇಳಿದ್ದೇನೆ. ಸಿದ್ಧವಾಗುತ್ತಿದೆ, ನಾನು ಮುಖ್ಯಮಂತ್ರಿ ಸ್ಥಾನದಿಂದ ಇಳಿಯುವುದರೊಳಗಾಗಿ ಕೊಟ್ಟೇ ಇಳಿಯುತ್ತೇನೆ ಎಂದಿದ್ದರು. ಆ ಕೆಲಸ ಇಂದಿನವರೆಗೂ ಆಗಿಲ್ಲವೆಂದರು.

## ಸಂತ ಶ್ರೇಷ್ಠ ಕನಕದಾಸ ಜಯಂತಿ ಆಚರಣೆ



■ ವಿಜಯಸಾಕ್ಷಿ ಸುದ್ದಿ, ಗದಗ

ಸಂತ ಶ್ರೇಷ್ಠ ಕನಕದಾಸ ಜಯಂತಿಯನ್ನು ನಗರದ ಹಾತಲಗೇರಿ ನಾಕಾದಲ್ಲಿ ಗುರುವಾರದಂದು ಆಚರಿಸಲಾಯಿತು. ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ, ಕನಕದಾಸರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಗೌರವ ಸಮರ್ಪಿಸಿದರು.

ಈ ಸಂದರ್ಭದಲ್ಲಿ ಗದಗ–ಬೆಟಗೇರಿ ನಗರಸಭೆ ಉಪಾಧ್ಯಕ್ಷೆ ಸುನಂದಾ ಬಾಕಳೆ, ಜಿಲ್ಲಾಧಿಕಾರಿ ವೈಶಾಲಿ.ಎಂ.ಎಲ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಹಿರೇಮಠ, ನಗರಸಭೆ ಸದಸ್ಯರು, ಸಮುದಾಯದ ಗಣ್ಯರು, ಮುಖಂಡರು ಉಪಸ್ಥಿತರಿದ್ದರು.

### ತಹಸೀಲ್ದಾರ ಕಚೇರಿಯ 'ಕನಕದಾಸ ಜಯಂತಿ' ಕಾರ್ಯಕ್ರಮದಲ್ಲಿ ವಾಸುದೇವ ವಿ.ಸ್ವಾಮಿ

## ಕನಕದಾಸರ ವಿಚಾರಗಳು ಕಾಲಾತೀತ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಕುಲ ಮುಖ್ಯವಲ್ಲ, ಮನುಷ್ಯತ್ವ ಮುಖ್ಯ ಎಂಬುದನ್ನು ತಮ್ಮ ವಚನ ಮತ್ತು ಕೀರ್ತನ ಸಾಹಿತ್ಯದ ಮೂಲಕ ಬದುಕಿನ ಮೌಲ್ಯಗಳನ್ನು ತಿಳಿಸುತ್ತಾ ಸಾಮಾಜಿಕ ಕ್ರಾಂತಿಗೆ ಕಾರಣರಾದ ಅಪ್ರತಿಮ ದಾರ್ಶನಿಕ ಕನಕದಾಸರ ಬದುಕು–ಬರಹ ಸಮಾಜಕ್ಕೆ ದಾರಿದೀಪವಾಗಿದೆ ಎಂದು ತಹಸೀಲ್ದಾರ ವಾಸುದೇವ ವಿ.ಸ್ವಾಮಿ ಹೇಳಿದರು.

ಅವರು ಗುರುವಾರ ಇಲ್ಲಿನ ತಹಸೀಲ್ದಾರ ಕಚೇರಿಯಲ್ಲಿ ಕನಕದಾಸ ಜಯಂತಿ ಅಂಗವಾಗಿ ಕನಕದಾಸರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.

ಕುರುಬ ಸಮಾಜದ ತಾಲೂಕಾಧ್ಯಕ್ಷ ಶೇಖಣ್ಣ ಕಾಳೆ, ವಿ.ಜಿ. ಪಡಗೇರಿ, ಸೋಮಣ್ಣ ಬೆಟಗೇರಿ ಮುಂತಾದವರು ಮಾತನಾಡಿ, ಸಮಾಜದ ಎಲ್ಲಾ ಕಟ್ಟುಪಾಡುಗಳನ್ನು ತೊರೆದು ಜನರನ್ನು ಕೀರ್ತನೆಗಳ ಮೂಲಕ ಪರಿವರ್ತನೆ ಮಾಡಿದ ಕನಕದಾಸರು ಒಬ್ಬ ಯುಗ ಪುರುಷರಾಗಿದ್ದಾರೆ. ಆಧುನಿಕ ಸಮಾಜಕ್ಕೆ ಕನಕದಾಸರ ತತ್ವ–ಸಂದೇಶಗಳ ಅಗತ್ಯವಿದೆ. ಭಕ್ತನ ಭಕ್ತಿ ದೇವರಿಗಿಂತ ದೊಡ್ಡದು. ದಾಸ ಶ್ರೇಷ್ಠರಲ್ಲಿಯೇ ಶ್ರೇಷ್ಠ ದಾಸರು ಕನಕದಾಸರು. ಅವರ ಆದರ್ಶ ಗುಣಗಳನ್ನು ಹಾಗೂ ಅವರು ತೋರಿದ ಸನ್ಮಾರ್ಗದಲ್ಲಿ ಸಮಾಜ ಸಾಗಬೇಕು ಎಂದು ಹೇಳಿದರು.



ಇದೇ ಸಂದರ್ಭದಲ್ಲಿ ತಹಸೀಲ್ದಾರ ವಾಸುದೇವ ಸ್ವಾಮಿ ಹಾಗೂ ಗ್ರೇಡ್ 2 ತಹಸೀಲ್ದಾರ ಮಂಜುನಾಥ ಅಮಾಸಿ ಅವರನ್ನು ಸಮಾಜದ ವತಿಯಿಂದ ಸನ್ಮಾನಿಸಲಾಯಿತು. ನಿಂಗಪ್ಪ ಬನ್ನಿ, ನೀಲಪ್ಪ ಪೂಜಾರ, ತಿಪ್ಪಣ್ಣ ಸಂಶಿ, ಸೋಮಣ್ಣ ಬೆಟಗೇರಿ, ಗಣೇಶ ಪೂಜಾರ, ಛಾಯಪ್ಪ ಬಸಾಪುರ, ರಾಮಣ್ಣ ರಿತ್ತಿ, ಗಣೇಶ ಪೂಜಾರ, ಪಶು ವೈದ್ಯಾಧಿಕಾರಿ ಎನ್.ಎಂ. ಹವಳದ, ಕಂದಾಯ ನಿರೀಕ್ಷಕ ಬಸವರಾಜ ಕಾತ್ರಾಳ, ಎಎಸ್‌ಐ ವೈ.ಎಸ್. ಕುಬಿಹಾಳ, ಹಿರಿಯ ಆರೋಗ್ಯ ನಿರೀಕ್ಷಕ ಬಿ.ಎಸ್. ಹಿರೇಮಠ, ರವಿ ಶಿಗ್ಲಿ ಮುಂತಾದವರು ಇದ್ದರು.

ಕನ್ನಡ ಸಾಹಿತ್ಯ ಪರಿಷತ್ ತಾಲೂಕಾಧ್ಯಕ್ಷ ಈಶ್ವರ ಮೆಡ್ಲೇರಿ ನಿರ್ವಹಿಸಿದರು.

> ಯಾವುದೇ ಒಂದು ಜಾತಿ, ಧರ್ಮ, ಪ್ರದೇಶ, ಭಾಷೆಗೆ ಸೀಮಿತವಾಗದ ಕನಕದಾಸರ ವಿಶ್ವ ಮಾನವ ಪರಿಕಲ್ಪನೆಯ ಸಂದೇಶಗಳು ಸಾರ್ವಕಾಲಿಕ ಪ್ರಸ್ತುತತೆಯನ್ನು ಪಡೆದಿವೆ. ಕನಕದಾಸರು ಕ್ರಾಂತಿಕಾರರು ಹಾಗೂ ಸಮಾಜ ಸುಧಾರಕರಾಗಿದ್ದರು. ಕನಕ, ಬಸವ, ಬುದ್ಧ ಮುಂತಾದವರು ಎಲ್ಲಾ ಕಾಲಕ್ಕೂ ಸಲ್ಲುವವರು. ಇವರ ವಿಚಾರವು ಕಾಲಾತೀತವಾಗಿದೆ ಎಂದು ತಹಸೀಲ್ದಾರ ವಾಸುದೇವ ವಿ.ಸ್ವಾಮಿ ನುಡಿದರು.

### ಶ್ರೀ ಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅಭಿಮತ

## ದಾಸರು ನುಡಿದಂತೆ ನಡೆದು ಸಮಾಜಕ್ಕೆ ದಾರಿದೀಪವಾದವರು

■ ವಿಜಯಸಾಕ್ಷಿ ಸುದ್ದಿ, ಧಾರವಾಡ

ಭಾರತದ ಪರಂಪರೆ, ಇತಿಹಾಸವನ್ನು ಅವಲೋಕಿಸಿದಾಗ ಅನೇಕ ಮಹನೀಯರನ್ನು, ಸಂತ–ಶ್ರೇಷ್ಠರನ್ನು ಜಾತಿ ಆಧಾರದ ಮೇಲೆ ಅವರ ಮನುಷ್ಯತ್ವ ಅಳೆಯದೆ, ಅವರ ಗುಣದ ಆಧಾರದ ಮೇಲೆ ಗುರುತಿಸಿ, ಗೌರವಿಸಿದ್ದಾರೆ. ದಾಸ ಶ್ರೇಷ್ಠ ಕನಕದಾಸರು ತಮ್ಮ ಜೀವನ ಕ್ರಮ, ತತ್ವ ಬೋಧನೆ, ಸಾಹಿತ್ಯ ರಚನೆ, ಕಿರ್ತನೆಗಳ ಮೂಲಕ ಮಹಾದಾರ್ಶನಿಕರಾಗಿದ್ದಾರೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ, ಕಲ್ಲಿದ್ದಲು ಮತ್ತು ಗಣಿ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಅವರು, ಗುರುವಾರ ಬೆಳಿಗ್ಗೆ ನಗರದ ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಆಯೋಜಿಸಿದ್ದ ದಾಸ ಶ್ರೇಷ್ಠ ಶ್ರೀ ಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ. ಮಾತನಾಡಿ, ದಾಸ ಶ್ರೇಷ್ಠ ಶ್ರೀ ಕನಕದಾಸರ ಜೀವನ, ತತ್ವಾದರ್ಶಗಳು ಇಂದಿನ ಸಮಾಜಕ್ಕೆ ಸ್ಫೂರ್ತಿಯಾಗಿದೆ. ಅವರು ರಚಿಸಿದ ನಿತ್ಯ ಸತ್ಯವಾಗಿರುವ ಮತ್ತು ಸಾವಿಲ್ಲದ ಸಾಹಿತ್ಯ ಸದಾ ಮಾರ್ಗದರ್ಶಿಯಾಗಿವೆ. ಸಮಾಜದಲ್ಲಿ ಪರಸ್ಪರ ಸಾಮರಸ್ಯ, ಐಕ್ಯತೆ, ಸಹಜೀವನಕ್ಕೆ ಅವರ ಸಂದೇಶಗಳು ದಾರಿ ದೀಪವಾಗಿವೆ ಎಂದು ಹೇಳಿದರು.

ಕಾನೂನು ತಜ್ಞ, ಚಿಂತಕ ಡಾ. ಲೋಹಿತ್ ನಾಯ್ಕರ ಕನಕದಾಸರ ಕುರಿತು ವಿಶೇಷ ಉಪನ್ಯಾಸ ನೀಡಿ, ಕನಕದಾಸರು ಕನ್ನಡ ಸಾಹಿತ್ಯಕ್ಕೆ ಕೀರ್ತನಕಾರರಾಗಿ, ತತ್ವಜ್ಞಾನಿಯಾಗಿ, ಸಂತರಾಗಿ, ದಾರ್ಶನಿಕರಾಗಿ ನಾಡಿನ ಸಾಂಸ್ಕೃತಿಕ ಪರಂಪರೆಗೆ ಅನನ್ಯ ಕೊಡುಗೆಗಳನ್ನು ನೀಡಿದ್ದಾರೆ. ಇಲ್ಲಿಯವರೆಗೆ ಅವರ 316 ಕೀರ್ತನೆಗಳು ಲಭ್ಯವಾಗಿವೆ ಎಂದರು.

ರಾಜೇಶ್ವರಿ ಸಾಲಗಟ್ಟಿ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದರು. ಮನಸೂರು ರೇವಣಸಿದ್ದೇಶ್ವರ ಮಹಾಮಠದ ಡಾ.ಬಸವರಾಜ ದೇವರು ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿ, ಕನಕದಾಸರ ಕಿರ್ತನೆ ಮತ್ತು ಕೃತಿಗಳು ಅಧಿಕಾರ, ಆಸ್ತಿ–ಅಂತಸ್ತುಗಳ ಚಿಂತೆ ಬಿಡಿಸುತ್ತವೆ. ಪಾಳೆಗಾರನಾಗಿದ್ದ ಕನಕದಾಸರು ಗುರುವಿನ ಅಧೀನರಾಗಿ, ಶ್ರೇಷ್ಠತೆ ಸಾಧಿಸಿದರು ಮತ್ತು ದಾಸ ಶ್ರೇಷ್ಠರಾದರು ಎಂದರು.

ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಗೋಪಾಲ ಬ್ಯಾಕೋಡ ಸೇರಿದಂತೆ ಗಣ್ಯರು ದಾಸ ಶ್ರೇಷ್ಠ ಶ್ರೀ ಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ, ಶ್ರೀ ಕನಕದಾಸರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡಿ, ನಮಿಸಿದರು.

ವೇದಿಕೆಯಲ್ಲಿ ಸಮಾಜ ಮುಖಂಡರು, ಹಿರಿಯರಾದ ಯಲ್ಲಮ್ಮ ನಾಯ್ಕರ, ದೇವರಾಜ ಕಂಬಳಿ, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಸದಸ್ಯರಾದ ವಿಜಯಾನಂದ ಶೆಟ್ಟಿ, ಶಿವು ಹಿರೇಮಠ, ಜ್ಯೋತಿ ಪಾಟೀಲ, ಶಂಕರ ಶಳಕೆ, ವಿಷ್ಣು ಕೊರ್ಲಹಳ್ಳಿ ಉಪಸ್ಥಿತರಿದ್ದರು. ಕುಮಾರ ಬೆಕ್ಕೇರಿ ಸ್ವಾಗತಿಸಿದರು. ಬಸವರಾಜ ಕುಪ್ಪಸಗೌಡ ಕಾರ್ಯಕ್ರಮ ನಿರೂಪಿಸಿದರು. ದೇವರಾಜ ಕಂಬಳಿ ವಂದಿಸಿದರು.

> ಕನಕದಾಸರು ಸಮಾಜದಲ್ಲಿ ಸಮಾನತೆಯ ಹರಿಕಾರರಾದರು. ನಿತ್ಯ ಕಾಯಕದ ಸಂದೇಶ ಸಾರಿದರು. ನುಡಿದಂತೆ ನಡೆದು ಗುರು, ದೇವರಿಗೆ ಅಷ್ಟೆ ಅಲ್ಲದೇ, ಸಮಾಜಕ್ಕೆ ದಾರಿ ದೀಪವಾದರು. ಭಾರತೀಯ ಸಂಸ್ಕೃತಿ, ಪರಂಪರೆಯಲ್ಲಿ ವ್ಯಕ್ತಿಗಳ ಗುಣ, ಜ್ಞಾನ, ವಿದ್ವತ್ತಿಗೆ ಹೆಚ್ಚು ಗೌರವ, ಸ್ಥಾನಮಾನಗಳನ್ನು ನೀಡಲಾಗಿದೆ. ಕನಕದಾಸರು ಪ್ರತಿಯೊಬ್ಬ ಭಾರತೀಯನಿಂದ ಪೂಜಿಸಲ್ಪಡುವ ಶ್ರೇಷ್ಠ ಸಂತರಾಗಿದ್ದಾರೆ ಎಂದು ಸಚಿವ ಪ್ರಲ್ಹಾದ ಜೋಶಿ ತಿಳಿಸಿದರು.

### ಬಿಜೆಪಿ ಗದಗ ಜಿಲ್ಲಾ ಕಾರ್ಯಾಲಯದಲ್ಲಿ ಕನಕದಾಸರ ಜಯಂತಿ ಆಚರಣೆ

## ದಾಸರು ಧರ್ಮದ ಹಾದಿಯಲ್ಲಿ ನಡೆಯಲು ಪ್ರೇರಣೆ



■ ವಿಜಯಸಾಕ್ಷಿ ಸುದ್ದಿ, ಗದಗ

ಭಾರತೀಯ ಜನತಾ ಪಾರ್ಟಿ ಗದಗ ಜಿಲ್ಲಾ ಕಾರ್ಯಾಲಯದಲ್ಲಿ ಭಕ್ತ ಕನಕದಾಸರ ಜಯಂತಿ ಆಚರಿಸಲಾಯಿತು.

ಸಭೆಯನ್ನುದ್ದೇಶಿಸಿ ಪಕ್ಷದ ಪ್ರಮುಖರಾದ ನಾಗರಾಜ ಕುಲಕರ್ಣಿ ಮಾತನಾಡಿ, ಭಾರತೀಯ ಸಂಸ್ಕೃತಿಯಲ್ಲಿ ಹಲವಾರು ದಾರ್ಶನಿಕರು ಸಮಸ್ತ ಭಾರತದ ಜನತೆಗೆ ಕಾಲ ಕಾಲಕ್ಕೆ ಧರ್ಮದ ಹಾದಿಯಲ್ಲಿ ನಡೆಯಲು ಮಾರ್ಗದರ್ಶನ ನೀಡಿದ್ದಾರೆ.

ಅದರಲ್ಲಿ ಕನಕದಾಸರು ತಮ್ಮ ತತ್ವಪದಗಳಿಂದ ಜನಸಾಮಾನ್ಯರಿಗೆ ಮನ ಮುಟ್ಟುವ ಹಾಗೆ ಧರ್ಮದ ಕುರಿತು ಮಾರ್ಗದರ್ಶನ ನೀಡಿದ್ದಾರೆ. ತಮ್ಮ ಕಠೋರ ತಪಸ್ಸಿನಿಂದ ಶ್ರೀಕೃಷ್ಣ ಪರಮಾತ್ಮನನ್ನು ಒಲಿಸಿಕೊಂಡ ಶ್ರೇಷ್ಠ ಭಕ್ತರಾಗಿದ್ದಾರೆ ಎಂದರು.

ಪಕ್ಷದ ಗದಗ ಜಿಲ್ಲಾಧ್ಯಕ್ಷ ಮುತ್ತಣ್ಣ ಲಿಂಗನಗೌಡ್ರ ಹಾಗೂ ಎಂ.ಎಂ. ಹಿರೇಮಠ ಮಾತನಾಡಿ, ಕನಕದಾಸ ಜಯಂತಿಯನ್ನು ನಡೆಸಲು ನಿಕಟಪೂರ್ವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಕಾರಣ. ಕಾಗಿನೆಲೆಯ ಪೀಠಕ್ಕೆ ಬಿ.ಎಸ್. ಯಡಿಯೂರಪ್ಪನವರು ಸಾಕಷ್ಟು ಅನುದಾನವನ್ನು ನೀಡಿ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಈ ನೆಲದಲ್ಲಿ ಹುಟ್ಟಿದ ನಾವೇ ಪುಣ್ಯವಂತರು ಎಂದರು.

ಕಾರ್ಯಕ್ರಮದಲ್ಲಿ ಸಿದ್ದು ಮೊರಬದ, ರಾಜಕುಮಾರ ಬಸವಾ, ಮಂಡಲಾಧ್ಯಕ್ಷ ಅನಿಲ ಅಬ್ಬಿಗೇರಿ, ಮುತ್ತಣ್ಣ ಕಡಗದ, ರವಿ ಕರಿಗಾರ, ಗಂಗಣ್ಣ ಮೆಣಸಿನಕಾಯಿ, ರಮೇಶ ಸಜ್ಜಗಾರ, ಮಂಜುನಾಥ ತಳವಾರ, ಅನಿಲ ಮುಳಗುಂದ, ಮುತ್ತಣ್ಣ ಜಂಗಣ್ಣವರ, ಮಂಜುನಾಥ ಶಾಂತಗೇರಿ, ಸಿದ್ದು ಪಲ್ಲೇದ, ನೀಲಪ್ಪ ಗುರಿಕಾರ, ಉಮೇಶ ಮಲ್ಲಾಪೂರ, ದೇವಪ್ಪ ಇಟಗಿ, ಅಶೋಕ ಕರೂರ, ಬಸವರಾಜ ಬಡಿಗೇರ, ವೀರಸಂಗಯ್ಯ ಮೊಕಾಶಿ, ಶಾರದಾ ಸಜ್ಜನರ, ಪಾರ್ವತಿ ಪಟ್ಟಣಶೆಟ್ಟಿ, ಅಕ್ಕಮ್ಮ ವಸ್ತ್ರದ, ಎಸ್.ಎಸ್. ಧರ್ಮದಾಸ, ರೇಖಾ ಬಂಗಾರಶೆಟ್ಟರ, ಸುಧೀರ ಕಾಟಿಗರ, ದೇವಪ್ಪ ಗೊಟೂರ, ಶಶಿಧರ ದಿಂಡೂರ, ಕೆ.ಪಿ. ಕೋಟಿಗೌಡ್ರ, ವಾಯ್.ಪಿ. ಅಡ್ನೂರ, ರಾಚಯ್ಯ ಹೊಸಮಠ, ಬಸವರಾಜ ಹರ್ಲಾಪೂರ, ದೇವೇಂದ್ರಪ್ಪ ಹೂಗಾರ, ವಿನೋದ ಹಂಸನೂರ ಮುಂತಾದವರು ಉಪಸ್ಥಿತರಿದ್ದರು.

## ಬೆಳಗಾವಿ ಅಧಿವೇಶನ : ಪೊಲೀಸ್ ವಾಸ್ತವ್ಯಕ್ಕೆ 2 ಕೋಟಿ ರೂ. ವೆಚ್ಚದಲ್ಲಿ 4 ಜರ್ಮನ್ ಟೆಂಟ್ ನಿರ್ಮಾಣ



■ವಿಜಯಸಾಕ್ಷಿ ಸುದ್ದಿ, ಬೆಳಗಾವಿ

, ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಡಿಸೆಂಬರ್ 4 ರಿಂದ 15ರ ವರೆಗೆ ಚಳಿಗಾಲದ ಅಧಿವೇಶನ ನಡೆಯಲಿದ್ದು, ಭದ್ರತೆಗಾಗಿ 5 ಸಾವಿರ ಪೊಲೀಸ್ ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗಿದೆ.

ಪೊಲೀಸ್ ಸಿಬ್ಬಂದಿಯ ವಾಸ್ತವ್ಯಕ್ಕೆ ಸುಮಾರು ಎರಡು ಕೋಟಿ ರೂಪಾಯಿ ವೆಚ್ಚದಲ್ಲಿ ನಾಲ್ಕು ಬೃಹತ್ ಜರ್ಮನ್ ಟೆಂಟ್‌ಗಳನ್ನು ನಿರ್ಮಿಸಲಾಗುತ್ತಿದೆ.

ಸುವರ್ಣ ವಿಧಾನ ಸೌಧದ ಅಲಾರವಾಡ ಬಳಿ 5 ಸಾವಿರಕ್ಕೂ ಹೆಚ್ಚು ಸಂಖ್ಯೆಯ ಪೊಲೀಸರ ವಾಸ್ತವ್ಯಕ್ಕೆ ನಾಲ್ಕು ದೊಡ್ಡ ದೊಡ್ಡ ಜರ್ಮನ್ ಟೆಂಟ್ ನೊಂದಿಗೆ ಬೃಹತ್ ಟೌನ್ ಶಿಪ್ ನಿರ್ಮಿಸಲಾಗುವುದು. ಬಂದೋಬಸ್ತ್‌ಗೆ ರಾಜ್ಯದ ನಾನಾ ಜಿಲ್ಲೆಗಳಿಂದ ಬರುವ ಪೊಲೀಸ್ ಸಿಬ್ಬಂದಿಗೆ ಇಲ್ಲಿ ವಾಸ್ತವ್ಯಕ್ಕೆ ಅನುವು ಮಾಡಿಕೊಡಲಾಗುವುದು ಎಂದು ಬೆಳಗಾವಿ ಪೊಲೀಸ್ ಆಯುಕ್ತ ಎಸ್‌ಎಸ್ ಸಿದ್ರಾಮಪ್ಪ ಅವರು ಮಾಹಿತಿ ನೀಡಿದ್ದಾರೆ.

ಒಂದು ಜರ್ಮನ್ ಟೆಂಟ್ 100 ಅಡಿ ಅಗಲ, 200 ಅಡಿ ಉದ್ದ ಇರಲಿದೆ. ನಾಲ್ಕು ದೊಡ್ಡ ಮತ್ತು ಒಂದು ಚಿಕ್ಕ ಟೆಂಟ್ ನಿರ್ಮಿಸಲಾಗುತ್ತಿದೆ. ಒಂದು ಬೃಹತ್ ಟೆಂಟ್‌ನಲ್ಲಿ 500 ಸಿಬ್ಬಂದಿ ಮಲಗಲು ವ್ಯವಸ್ಥೆ ಇರಲಿದೆ. ಸಿಂಗಲ್ ಕಾಟ್ ಜೊತೆ ಬೆಡ್-ದಿಂಬು, ಬೆಡ್‌ಶೀಟ್, ಹಾಸಿಗೆ, ಚಾರ್ಜಿಂಗ್ ವ್ಯವಸ್ಥೆ ಇರಲಿದೆ.

ಹಿರಿಯ ಅಧಿಕಾರಿಗಳಿಗಾಗಿ ಚಿಕ್ಕ ಟೆಂಟ್ ನಿರ್ಮಾಣ ಮಾಡಲಾಗಿದೆ. ಏಕಕಾಲದಲ್ಲಿ 2 ಸಾವಿರ ಜನರು ಮಲಗಬಹುದಾಗಿದೆ. ಪಾಳಿ ಕೆಲಸ ಮಾಡೋದರಿಂದ ಯಾವುದೇ ತೊಂದರೆ ಆಗಲ್ಲ ಎಂದು ಅವರು ತಿಳಿಸಿದ್ದಾರೆ.

## ಪುರಸಭೆ ಸದಸ್ಯನ ವಿರುದ್ಧ ಪ್ರಕರಣ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪುರಸಭೆ ಸದಸ್ಯ ಮಹೇಶ ಹೊಗೆಸೊಪ್ಪಿನ ಅವರು ನ.26ರಂದು ಪಟ್ಟಣದ ಮುಖ್ಯ ಬಜಾರ ರಸ್ತೆಯಲ್ಲಿ ಅಧಿಕಾರಿಗಳಿಂದ ಪೂರ್ವಾನುಮತಿ ಪಡೆಯದೇ, ಕಾನೂನು ಬಾಹಿರವಾಗಿ ರಸ್ತೆ ಬಂದ್ ಮಾಡಿ, ಸಾರ್ವಜನಿಕರಿಗೆ ತೊಂದರೆ ಮಾಡಿದ್ದಾರೆಂದು ಮುಖ್ಯಾಧಿಕಾರಿ ಶಂಕರ ಹುಲ್ಲಮ್ಮನವರ ನೀಡಿದ ದೂರಿನನ್ವಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಲೋಕಾಯುಕ್ತ ಪೊಲೀಸ್ ಇನ್ಸ್‌ಪೆಕ್ಟರ್ ರವಿ ಪುರುಷೋತ್ತಮ ಭೇಟಿ



■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಗದಗ ಲೋಕಾಯುಕ್ತ ಪೊಲೀಸ್ ಇನ್ಸ್‌ಪೆಕ್ಟರ್ ರವಿ ಪುರುಷೋತ್ತಮ ಶಿರಹಟ್ಟಿಗೆ ಹೋಗುವ ಮಾರ್ಗದಲ್ಲಿ ಮುಳಗುಂದ ಪಟ್ಟಣ ಪಂಚಾಯಿತಿ ಕಾರ್ಯಾಲಯಕ್ಕೆ ಅನಿರೀಕ್ಷಿತವಾಗಿ ಭೇಟಿ ನೀಡಿ, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ-ಸಿಬ್ಬಂದಿಗಳೊಂದಿಗೆ ಹಾಗೂ ಸಾರ್ವಜನಿಕರೊಂದಿಗೆ ಪಟ್ಟಣದ ಅಭಿವೃದ್ಧಿ ಕಾರ್ಯಗಳ ಮಾಹಿತಿ ಪಡೆದರು.

ಪ.ಪಂ ಮುಖ್ಯಾಧಿಕಾರಿ ಮಂಜುನಾಥ ಗುಳೇದ, ರೈತ ಸಂಘದ ಅಧ್ಯಕ್ಷ ಬಸವರಾಜ ಕರಿಗಾರ, ಕರವೇ ಉಪಾಧ್ಯಕ್ಷ ದಾವುದ ಜಮಾಲಸಾಬನವರ, ಕಿರಣ ಕುಲಕರ್ಣಿ, ದೇವರಾಜ ಸಂಗನಪೇಟಿ, ಮುನ್ನಾ ಡಾಲಾಯತ ಸೇರಿದಂತೆ ಸಾರ್ವಜನಿಕರು ಇದ್ದರು.

## ಸನ್ಮಾರ್ಗ ಮಹಾವಿದ್ಯಾಲಯದಲ್ಲಿ 'ಸಂವಿಧಾನ ದಿನ' ಆಚರಣೆ



■ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ಸನ್ಮಾರ್ಗ ಮಹಾವಿದ್ಯಾಲಯದಲ್ಲಿ ಸಂವಿಧಾನದ ದಿನಾಚರಣೆಯನ್ನು ಆಚರಿಸಿ, ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಪ್ರಾಚಾರ್ಯ ಪ್ರೇಮಾನಂದ ರೋಣದ ಸಂವಿಧಾನ ರಚನಾ ಕ್ರಮ, ಶಾಸಕಾಂಗ, ರಾಜ್ಯಾಂಗ, ನ್ಯಾಯಾಂಗಗಳು, ಅನುಸರಿಸಬೇಕಾದ ನೀತಿ-ನಿಯಮಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು. ಚೇರಮನ್ ಪ್ರೊ. ರಾಜೇಶ್ ಕುಲಕರ್ಣಿ, ಕನ್ನಡ ಉಪನ್ಯಾಸಕ ಶ್ರೀ ಪರಶುರಾಮ ಕೊಟ್ನಿಕಲ್ ಸಾಂದರ್ಭಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ನಿರ್ದೇಶಕರಾದ ಪ್ರೊ. ಉಡುಪಿ ದೇಶಪಾಂಡೆ, ಪ್ರೊ. ರೋಹಿತ್ ಒಡೆಯರ್, ಪ್ರೊ. ಸೈಯದ್ ಮತೀನ ಮುಲ್ಲಾ, ಪ್ರೊ. ರಾಹುಲ್ ಒಡೆಯರ್, ಆಡಳಿತಾಧಿಕಾರಿ ಎಮ್.ಸಿ. ಹಿರೇಮಠ, ಉಪನ್ಯಾಸಕರು, ಮಹಾವಿದ್ಯಾಲಯದ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

### ಮನುಜನ ಮಂಡೆ(ತಲೆ)ಯನ್ನು ಹರಿತಗೊಳಿಸುವ ಕನಕದಾಸರ ಮುಂಡಿಗೆಗಳು

# ಸಮಾಜದ ಓರೆ-ಕೋರೆ ತಿದ್ದಿದ ಕನಕದಾಸರು

ಕನ್ನಡ ನಾಡಿನ ಈ ಪಾವನ ನೆಲದಲ್ಲಿ ಅನೇಕಾನೇಕ ಮಹಾನುಭಾವರು ಆವಿರ್ಭವಿಸಿ ತಮ್ಮ ಲೋಕ ಕಲ್ಯಾಣ ನಡೆ-ನುಡಿಗಳಿಂದ ಜಗತ್ತಿಗೆ ಜ್ಯೋತಿರ್ಮಯ ಬೆಳಕು ನೀಡಿದ್ದಾರೆ. ಅಂತಹ ಅಮೃತ ಶಕ್ತಿಗಳ, ಜ್ಯೋತಿರ್ಮಾಲೆಯಲ್ಲಿ ಚಿರಸ್ಥಾಯಿಯಾಗಿ ಪ್ರಜ್ವಲಿಸುತ್ತಿರುವ ಬೆಳಕು ಎಂದರೆ ಮಹಾನ್ ಅನುಭಾವಿ ಕವಿ, ದಾಸ ಸಾಹಿತ್ಯದ ಅಶ್ವಿನಿ ದೇವತೆ, ಸಂತ ಶ್ರೇಷ್ಠರಾದ ಕನಕದಾಸರು. ಅಂತರಂಗದ ಅರಿವಿನ ಸಾಕ್ಷಾತ್ಕಾರದಿಂದ ಅವಿರ್ಭವಿಸಿದ ಅನುಭಾವಿಗಳು. ಸಮಾಜದ ಓರೆ-ಕೋರೆಗಳನ್ನು ತಮ್ಮ ಕೀರ್ತನೆ, ಕಾವ್ಯಗಳಿಂದ ತಿದ್ದಿದವರು. ಅಂತಹ ಶ್ರೇಷ್ಠ ಕೊಡುಗೆಗಳಲ್ಲಿ ಮುಂಡಿಗೆಗಳು ಸಾಹಿತ್ತಿಕ ದೃಷ್ಟಿಕೋನದಿಂದ ಕನಕದಾಸರ ಮಹತ್ವದ ಕಾಣಿಕೆಯೆಂದೆನಿಸುತ್ತವೆ.

ದಾಸ ಸಾಹಿತ್ಯದಲ್ಲಿ ಕಂಡು ಬರುವ 'ಮುಂಡಿಗೆ' ಒಂದು ವಿಶಿಷ್ಟವಾದ ಕನ್ನಡ ಸಾಹಿತ್ಯದ ಪ್ರಾಕಾರ. ಒಂದು ವಿಷಯವನ್ನು ಹೇಗೆ ನೇರವಾಗಿ ಹೇಳಬಹುದೋ ಅಷ್ಟೇ ವಿಭಿನ್ನವಾಗಿ ಮತ್ತು ಗೂಢವಾಗಿಯೇ ಹೇಳಬಹುದು. ಮುಂಡಿಗೆ ಎಂಬುದಕ್ಕೆ 'ಮುಂಡಾಸು' ಎಂಬ ಅರ್ಥವೂ ಇದೆ. ಒಂದು ಬಟ್ಟೆಯನ್ನು ಬಿಡಿಸಿ ಇಟ್ಟಾಗ ನೇರ ಮತ್ತು ನಿರ್ದಿಷ್ಟ. ಅದೇ ಬಟ್ಟೆಯನ್ನು ವಿಭಿನ್ನವಾಗಿ ಸುತ್ತಿ ತಲೆಗೆ ಕಟ್ಟಿಕೊಂಡಾಗ ಆ ಬಟ್ಟೆಗೆ ಒಂದು ವಿಭಿನ್ನ ಮರ್ಯಾದೆ ಮತ್ತು ಕ್ಲಿಷ್ಟತೆಯೂ ಕಾಣುತ್ತದೆ.


ಮುಂಡಿಗೆಯು ಬುದ್ಧಿಶಕ್ತಿಯ ಸ್ವರೂಪವಾಗಿ ತಿಣುಕುವಂಥಾ ಮನೋರಂಜನೆಯನ್ನು ಉದ್ದೇಶವಾಗಿಟ್ಟುಕೊಂಡು ರಚಿತವಾಗಿದ್ದ ಸಾಹಿತ್ಯದ ಪ್ರಕಾರ. ಇದರ ಮಹತ್ವವನ್ನು ಅರಿತವರಾದ ಆಳುವ ದೊರೆಗಳು ಶತ್ರುಗಳಿಂದ ಸುರಕ್ಷಿತವಾಗಿ ಇರುವುದಕ್ಕಾಗಿ ತಮ್ಮ ಸಂದೇಶಗಳನ್ನು ಮುಂಡಿಗೆಯ ರೂಪದ ಗುಪ್ತ ಭಾಷೆಯ ಮುಖಾಂತರ ಬರೆದು ಗೂಢಚಾರಿಗಳಿಗೆ ಕಳಿಸುತ್ತಿದ್ದರಂತೆ. ಅದನ್ನು ರಚಿಸುವವರು ಮಹಾ ಬುದ್ಧಿವಂತರು ಎಂಬುದಕ್ಕೆ ಎರಡು ಮಾತಿಲ್ಲ. ಕನಕದಾಸರು ಅಂಥಾ ಮೇಧಾವಿಗಳಲ್ಲಿ ಒಬ್ಬರು.

ಕನಕದಾಸರು ತಮ್ಮ ಆತ್ಮೀಯರ ಜೊತೆ ಇರುವಾಗ ತಮಗೆ ನಿದ್ರೆ ಬರುತಿದೆ ಎಂಬುದನ್ನು ಮುಂಡಿಗೆಯ ಮೂಲಕ ಹೀಗೆ ಹೇಳುತ್ತಾರೆ-"ಹರನ ಹಾರನ ಆಹಾರನ ಸುತನ ಒಡೆಯನ ವೈರಿಯ ಅನುಜನ ಮಡದಿಯು ಬರುತಲಿಹಳು" ಅಂದರೆ, ಹರನ ಎಂದರೆ ಶಿವನ ಹಾರವಾದುದು ಸರ್ಪ. ಆ ಸರ್ಪದ ಆಹಾರ ವಾಯು. ಈ ವಾಯುವಿನ ಸುತ ಆಂಜನೇಯ. ಅವನ ಒಡೆಯ ರಾಮ. ಅವನ ವೈರಿ ರಾವಣ. ಆ ರಾವಣನ ತಮ್ಮ ಕುಂಭಕರ್ಣ. ಅವನ ಮಡದಿ ನಿದ್ರಾದೇವಿ. ಹಲವು ಪದಗಳಲ್ಲಿ ಹೇಳಿದರೆ ನಿದ್ರಾದೇವಿ ಬರುತಿಹಳು ಎಂದು.

"ಪರಮಪುರುಷ ನೀನೆಲ್ಲಿಕಾಯಿ
ಸರಸಿಯೊಳಗೆ ಕರಿಕೂಗಲುಕಾಯಿ
ಹಿರಿದು ಮಾಡಿದ ಪಾಪ ನುಗ್ಗೇಕಾಯಿ
ಹರಿ ನಿನ್ನ ಧ್ಯಾನ ಬಾಳೇಕಾಯಿ
ಸರುವ ಜೀವರ್ಗುಣಿಸಿಯುಂ ಬದನೆಕಾಯಿ
ಅರಿಷಡ್ವರ್ಗಗಳೊದಗಿಲಿಕಾಯಿ"

**ಇದರ ತಾತ್ಪರ್ಯ:** ಪರಮಪುರುಷನೇ ನೀನೆಲ್ಲಿದ್ದೀಯ? ನನ್ನನ್ನು ರಕ್ಷಿಸು (ನೀನೆಲ್ಲಿ ಕಾಯಿ). ಸರೋವರದಲ್ಲಿ ಗಜೇಂದ್ರ ಮೊಸಳೆಯ ಬಾಯಿಗೆ ಸಿಕ್ಕಿ ಕೂಗಿಕೊಂಡಾಗ ಕಾಪಾಡು (ಕರಿಕೂಗಲು ಕಾಯಿ). ಅಪಾರವಾದ ಪಾಪ ಸಂಚಯವನ್ನೆಲ್ಲಾ ನುರಿದು ಪುಡಿಪುಡಿಯಾಗುವಂತೆ ಮಾಡು(ನುಗ್ಗೆ ಕಾಯಿ). ಹರಿ ನಿನ್ನ ಧ್ಯಾನವೇ ಉಸಿರಾಗಿ ಬಾಳುವಂತೆ ಮಾಡು (ಬಾಳೇಕಾಯಿ). ಎಲ್ಲ ಜೀವರಾಶಿಗಳನ್ನೂ ಉಣಿಸಿ ತಣಿಸಿ ಬೆಳೆಸುವ ನೀನು ಮಾತ್ರ ಉಣ್ಣದವನು (ಜೀವರಿಗುಣಿಸಿಯುಂಬದನೆಕಾಯಿ). ಅರಿಷಡ್ವರ್ಗಗಳಿಲ್ಲದಂತೆ ರಕ್ಷಿಸು(ಇಲಿಕಾಯಿ).

"ಮರವ ನುಂಗುವ ಪಕ್ಷಿ ಮನೆಯೊಳಗೆ ಬಂದಿದೆ, ಇದರ ಕುರುಹು ಪೇಳಿ ಕುಳಿತಿರುವ ಜನರು, ಒಂಟಿ ಕೊಂಬಿನ ಪಕ್ಷಿ ಒಡಲೊಳಗೆ ಕರುಳಿಲ್ಲ ಗಂಟಲು ಮೂರು ಉಂಟು ಮೂಗಿಲ್ಲ ಕುಂಟು ಮನುಜನ



ತೆರದಿ ಕುಳಿತಿಹುದು ಮನೆಯೊಳಗೆ ಎಂಟು ಹತ್ತರ ಭಕ್ಷ್ಯ ಭಕ್ಷಿಸುವುದು"

ಬೀಸುವ ಕಲ್ಲನ್ನು ಹಿಡಿದು ಬೀಸುವ ಮರದ ಗೂಟವೇ ಒಂಟಿ ಕೊಂಬು. ಹೊಟ್ಟೆಯಲ್ಲಿ ಏನೂ ಇಲ್ಲ. ಖಾಲಿ ಶರೀರ. ಬೀಸುವ ಕಲ್ಲಿನ ಮೇಲ್ಭಾಗದ ಕಲ್ಲಿನಿಂದ ಧಾನ್ಯ ಇಳಿಯಲು ಮಾಡಿರುವ ಮೂರು ರಂಧ್ರಗಳು. ಉಸಿರಾಟಕ್ಕೆ ಮೂಗು ಇಲ್ಲ. ಎಲ್ಲಿಯೂ ಚಲಿಸದೇ ಇರುವುದು. ಹತ್ತು ಹಲವಾರು ಧಾನ್ಯಗಳನ್ನು ಅದರ ಬಾಯಲ್ಲಿಟ್ಟಾಗ ತಿಂದು ಹಾಕುವುದು. ಇದು ಸಾಮಾನ್ಯವಾದ ಮೇಲುನೋಟದ ಅರ್ಥ. ಪಾರಮಾರ್ಥಿಕ ಅರ್ಥದಲ್ಲಿ ಮರವ ನುಂಗುವ ಪಕ್ಷಿ ಮನೆಯೊಳಗೆ ಬಂದಿದೆ ಎಂದರೆ ಮಾಯೆಯನ್ನು ನುಂಗುವ ಚೈತನ್ಯ ರೂಪಿ ಪರಮಾತ್ಮ ದೇಹವೆಂಬ ಮನೆಯೊಳಗೆ ಬಂದು ಕುಳಿತಿದ್ದಾನೆ. ಓಂ ಎಂಬಲ್ಲಿ ಓ ಅಕ್ಷರದ ಮೇಲೆ ದೀರ್ಘ ಸ್ವರದ ಕೊಂಬಿದೆ. ಸಾಂಸಾರಿಕ ವ್ಯಾಮೋಹದ ಕರುಳು ಒಡಲಿನಲ್ಲಿಲ್ಲ. ಓಂಕಾರದ ಅ,ಉ,ಮ ಮೂರಕ್ಷರಗಳೇ ಮೂರು ರಂಧ್ರಗಳು. ವಿಷಯ ವಾಸನೆಯ ಗುಂಗಿಲ್ಲವೆಂಬುದೇ ಮೂಗಿಲ್ಲವೆಂಬುದರ ಅರ್ಥ. ಪಂಚಭೂತಗಳು, ಮನ, ಬುದ್ಧಿ, ಅಹಂಕಾರಗಳೂ ಸೇರಿ ಎಂಟು ಹಾಗೂ ಜ್ಞಾನೇಂದ್ರಿಯಗಳು ಹಾಗೂ ಕರ್ಮೇಂದ್ರಿಯಗಳೂ ಸೇರಿ ಹತ್ತು ಇವುಗಳ ಮೂಲಕ ಎಲ್ಲಾ ವಿಷಯಗಳನ್ನೂ ಅರಗಿಸಿಕೊಳ್ಳುವುದು ಅಂದರೆ ನಿರ್ಲಿಪ್ತತೆಯನ್ನು ತಂದುಕೊಳ್ಳುವುದು ಎಂದಾಗುತ್ತದೆ.



**-ಈಶ್ವರ ಎಸ್.ಮೆಡ್ಲೇರಿ.**
**ಅಧ್ಯಕ್ಷರು, ಕಸಾಪ, ಲಕ್ಷ್ಮೇಶ್ವರ.**

### ಡಿಸೆಂಬರ್ 1, 'ವಿಶ್ವ ಏಡ್ಸ್ ದಿನ'ದ ಪ್ರಯುಕ್ತ ಲೇಖನ

# ಅಸಮಾನತೆ ಕೊನೆಗೊಳಿಸಿ, ಏಡ್ಸ್ ನಿರ್ಮೂಲನೆ ಮಾಡಿ

ಪ್ರತಿ ವರ್ಷ ಡಿಸೆಂಬರ್ 1ರಂದು, ವಿಶ್ವದಾದ್ಯಂತ 'ವಿಶ್ವ ಏಡ್ಸ್ ದಿನ'ವನ್ನು ಆಚರಿಸಲಾಗುತ್ತದೆ. ಈ ವಿಶ್ವ ಏಡ್ಸ್ ದಿನವು ಸಮುದಾಯಗಳ ಸಾಧನೆಗಳ ಆಚರಣೆಗಿಂತ ಹೆಚ್ಚು ಸಮುದಾಯಗಳನ್ನು ತಮ್ಮ ನಾಯಕತ್ವದ ಪಾತ್ರಗಳಲ್ಲಿ ಸಕ್ರಿಯಗೊಳಿಸಲು ಮತ್ತು ಬೆಂಬಲಿಸಲು ಇದು ಕ್ರಿಯೆಯ ಕರೆಯಾಗಿದೆ. ಜಗತ್ತಿನಲ್ಲಿ ವೈದ್ಯ ವಿಜ್ಞಾನಕ್ಕೆ ಸವಾಲಾಗಿರುವ ಸೋಂಕು ಎಂದರೆ ಅದು ಹೆಚ್.ಐ.ವಿ/ಏಡ್ಸ್. ಇದು ಇತಿಹಾಸದಲ್ಲೇ ಅತ್ಯಂತ ವಿನಾಶಕಾರಿ ಸಾಂಕ್ರಾಮಿಕ ರೋಗಗಳಲ್ಲಿ ಒಂದಾಗಿದೆ.

ಹೀಗಾಗಿ ಈ ಸೋಂಕಿಗೊಳಗಾದವರು ನಡೆಸುವ ಹೋರಾಟದ ಯಶಸ್ಸಿಗೆ ಧೈರ್ಯ ತುಂಬಲು ಸಂಕಲ್ಪವನ್ನು ಮಾಡುವಂತಹ ಮಹತ್ವದ ದಿನ ವಿಶ್ವ ಏಡ್ಸ್ ದಿನವಾಗಿದೆ. ಏಡ್ಸ್ ಸೋಂಕನ್ನು ಮೊಟ್ಟ ಮೊದಲ ಬಾರಿಗೆ 1981ರಲ್ಲಿ ಅಮೆರಿಕದಲ್ಲಿ ಗುರುತಿಸಲಾಯಿತು. ಭಾರತದಲ್ಲಿ 1986ರಲ್ಲಿ ಚೆನ್ನೈನಲ್ಲಿ ಪತ್ತೆ ಮಾಡಲಾಯಿತು. ಏಡ್ಸ್‌ಗೆ ಕಾರಣವಾದ ವೈರಸ್ ಹೆಚ್‌ಐವಿಯನ್ನು ಮೊಟ್ಟಮೊದಲ ಬಾರಿಗೆ 1983ರಲ್ಲಿ ಫ್ರೆಂಚ್ ವಿಜ್ಞಾನಿಗಳು ಪತ್ತೆ ಹಚ್ಚಿದರು. ಇಲ್ಲಿಯವರೆಗೂ ಸುಮಾರು 35 ಮಿಲಿಯನ್‌ಗಿಂತಲೂ ಹೆಚ್ಚು ಜನರು ಹೆಚ್‌ಐವಿ ಅಥವಾ ಏಡ್ಸ್ ಸಂಬಂಧಿತ



ಕಾಯಿಲೆಗಳಿಂದ ಸಾವನ್ನಪ್ಪಿದ್ದಾರೆ. ಡಿಸೆಂಬರ್ 1, 1988ರಲ್ಲಿ ಮೊದಲ ಬಾರಿಗೆ ವಿಶ್ವ ಆರೋಗ್ಯ ಸಂಸ್ಥೆಯು ಯು.ಎನ್. ಏಡ್ಸ್ ಸಂಯುಕ್ತ ನೇತೃತ್ವದಲ್ಲಿ ಈ ವಿಶ್ವ ಏಡ್ಸ್ ದಿನವನ್ನು ಆಚರಿಸಲು ನಿರ್ಧರಿಸಿತು.


ಹೆಚ್‌ಐವಿ / ಏಡ್ಸ್ ಕಾರ್ಯ ಚಟುವಟಿಕೆಗಳಿಗೆ ಸಂಪನ್ಮೂಲ ಕೂಡಿಸುವುದು, ವ್ಯಕ್ತಿಗತ ಮತ್ತು ಸಮುದಾಯದಲ್ಲಿ ಈ ಸೋಂಕಿನಿಂದ ಉಂಟಾಗುತ್ತಿರುವ ಸಮಸ್ಯೆಗಳು ಮತ್ತು ಇದರ ಬಗ್ಗೆ ಜಾಗೃತಿ ಹೆಚ್ಚಿಸುವುದು ಹಾಗೂ ಹೆಚ್‌ಐವಿ ಸೋಂಕಿತರಾಗಿರುವರಿಗೆ ಬೆಂಬಲ ನೀಡುವುದು, ಅವರು ಅನುಭವಿಸುತ್ತಿರುವ ಕಳಂಕ ತಾರತಮ್ಯವನ್ನು ಕಡಿಮೆ ಮಾಡುವುದು ಹಾಗೂ ಹೆಚ್‌ಐವಿ ಏಡ್ಸ್ ಬೆಳವಣಿಗೆಯತ್ತ ದೃಷ್ಟಿ ಬೀರಿ, ರಾಷ್ಟ್ರೀಯ ಏಡ್ಸ್ ನಿಯಂತ್ರಣ ಕಾರ್ಯಕ್ರಮಗಳತ್ತ ಪ್ರತಿಯೊಬ್ಬರ ಗಮನ ಸೇಳೆಯುವುದು ಇದರ ಮುಖ್ಯ ಉದ್ದೇಶವಾಗಿದೆ.

ಊಖಗಿ ಇದನ್ನು ಹ್ಯೂಮನ್ ಇಮ್ಯುನೊ ಡಿಫಿಷಿಯನ್ಸಿ ವೈರಸ್ ಎಂದೂ ಕರೆಯುತ್ತಾರೆ. ಇದು ದೇಹದಲ್ಲಿನ ಪ್ರತಿರಕ್ಷಣಾ ವ್ಯವಸ್ಥೆಯ ಮೇಲೆ ಪರಿಣಾಮ ಬೀರುವ ಒಂದು ರೀತಿಯ ವೈರಸ್ ಆಗಿದೆ ಮತ್ತು ದೇಹದಲ್ಲಿನ ಸೋಂಕುಗಳ ವಿರುದ್ಧ ಹೋರಾಡುವ ಜವಾಬ್ದಾರಿಯುತ ಜೀವಕೋಶಗಳ ಮೇಲೆ ದಾಳಿ ಮಾಡುತ್ತದೆ. ಇದರ ಪರಿಣಾಮವಾಗಿ, ಮಾನವ ದೇಹವು ದುರ್ಬಲವಾಗುತ್ತದೆ ಮತ್ತು ವಿವಿಧ ರೋಗಗಳು ಮತ್ತು ಸೋಂಕುಗಳಿಗೆ ಒಳಗಾಗುತ್ತದೆ.

ಏಡ್ಸ್, ಅಥವಾ ಸ್ವಾಧೀನಪಡಿಸಿಕೊಂಡ ಇಮ್ಯುನೊ ಡಿಫಿಷಿಯನ್ಸಿ ಸಿಂಡ್ರೋಮ್, ದೀರ್ಘಕಾಲದ ಮತ್ತು ಮಾರಣಾಂತಿಕ ಕಾಯಿಲೆಯಾಗಿದೆ. ಹ್ಯೂಮನ್ ಇಮ್ಯುನೊ ಡಿಫಿಷಿಯನ್ಸಿ ವೈರಸ್ ಸೋಂಕು ಏಡ್ಸ್ ಬೆಳವಣಿಗೆಗೆ ಕಾರಣವಾಗುತ್ತದೆ. ಸೋಂಕಿನ ಈ ಹಂತವು ಅತ್ಯಂತ ಅಪಾಯಕಾರಿಯಾಗಿದೆ. ಏಡ್ಸ್ ಹೊಂದಿರುವ ರೋಗಿಗಳಲ್ಲಿ ನಿರ್ದಿಷ್ಟ ಬಿಳಿ ರಕ್ತ ಕಣಗಳ ಮಟ್ಟವನ್ನು ಗಮನಾರ್ಹವಾಗಿ ಕಡಿಮೆಯಾಗುತ್ತದೆ ಮತ್ತು ಅವರ ಪ್ರತಿರಕ್ಷಣಾ ವ್ಯವಸ್ಥೆಗಳು ಕುಂಠಿತಗೊಳ್ಳುತ್ತವೆ.

ಪ್ರಸ್ತುತ, ಎಚ್‌ಐವಿ/ಏಡ್ಸ್‌ಗೆ ಚಿಕಿತ್ಸೆ ಇಲ್ಲ. ಒಬ್ಬ ವ್ಯಕ್ತಿಯು ಊಖಗಿ ಸೋಂಕಿಗೆ ಒಳಗಾದ ನಂತರ, ಈ ವೈರಸ್ ದೇಹವನ್ನು ಬಿಡುವುದಿಲ್ಲ. ಇದನ್ನು ತೊಡೆದುಹಾಕಲು ಸಾಧ್ಯವಾಗದಿದ್ದರೂ, ನಿಯಂತ್ರಣದಲ್ಲಿ ಮತ್ತು ಯಾವುದೇ ತೊಡಕುಗಳನ್ನು ತಡೆಯಲು ಸಹಾಯ ಮಾಡುವ ವಿವಿಧ ಔಷಧಿಗಳಿವೆ. ಇದನ್ನು ಆಂಟಿರೆಟ್ರೋವೈರಲ್ ಥೆರಪಿ ಎಂದು ಕರೆಯಲಾಗುತ್ತದೆ.

ಈ ವಿಶ್ವ ಏಡ್ಸ್ ಲಸಿಕೆ ದಿನದಂದು ಜನರಲ್ಲಿ ಜಾಗೃತಿ ಮೂಡಿಸಲು, HIV ತಡೆಗಟ್ಟುವ ವಿಧಾನಗಳ ಬಗ್ಗೆ ಅವರಿಗೆ ಶಿಕ್ಷಣ ನೀಡಿ, ಎಚ್‌ಐವಿ ಮತ್ತು ಏಡ್ಸ್ ಸುತ್ತಲಿನ ಕಳಂಕವನ್ನು ಸಹ ಮುರಿಯಬೇಕಿದೆ.



- ಎಂ.ಎಚ್. ಸವದತ್ತಿ.
ಶಿಕ್ಷಕರು, ಸರಕಾರಿ ಪ್ರೌಢಶಾಲೆ-ಏಕಲಾಸಪೂರ.



■ವಿಜಯಸಾಕ್ಷಿ ಸುದ್ದಿ, ನವಲಗುಂದ

ಇಬ್ರಾಹಿಂಪೂರ, ನರಗುಂದ, ಶಲವಡಿ, ನಾಯಕನೂರ, ತಿರ್ಲಾಪೂರ, ಇಂಗಳಹಳ್ಳಿ, ಕರಮುಡಿ, ನೀರಲಗಿ, ಅಕ್ಕಿಗುಂದ, ಬಟ್ಟೂರ, ಯಾವಗಲ್ಲ, ಕೊತಬಾಳ, ಗದಗ, ಬಾಗಲಕೋಟಿ, ಅರಕೇರಿ, ಕೆಂಗವಳ್ಳಿ, ಹಾಗಲಕೇರಿ, ಅರೇಕುರಟ್ಟಿ, ಗ್ರಾಮಗಳ ಯಡೆಯೂರ ಸಿದ್ದಲಿಂಗೇಶ್ವರ ಭಕ್ತರ 48ನೇ ವರ್ಷದ ಪಾದಯಾತ್ರಿಗಳಿಗೆ ಮುಳಗುಂದ ಬಾಲಲೀಲಾ ಮಾಹಾಂತ ಶಿವಯೋಗಿ ಗವಿಮಠದಲ್ಲಿ ಶಿವಬಸವ ಹಸಬಿ ಕುಟುಂಬದವರಿಂದ ಬೆಳಗಿನ ಪ್ರಸಾದ ಸೇವೆ ನೆರವೇರಿಸಿ, ಬೀಳ್ಕೊಡಲಾಯಿತು.



■ವಿಜಯಸಾಕ್ಷಿ ಸುದ್ದಿ, ಗದಗ

ಹೋಟೆಲ್ ಒಡೆಯರ ಸಂಘ ಗದಗ-ಬೆಟಗೇರಿ ವತಿಯಿಂದ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ನೂತನ ಅಧ್ಯಕ್ಷರಾದ ಈಶ್ವರಪ್ಪ ಮುನವಳ್ಳಿ ಮತ್ತು ಗೌರವ ಕಾರ್ಯದರ್ಶಿ ಪ್ರಕಾಶ್ ಉಗಲಾಟದ ಅವರನ್ನು ಸನ್ಮಾನಿಸಲಾಯಿತು. ಹೋಟೆಲ್ ಒಡೆಯರ ಸಂಘದ ಅಧ್ಯಕ್ಷ ವಿಶ್ವನಾಥ್ ಶೆಟ್ಟಿ, ಗೌರವಾಧ್ಯಕ್ಷ ಬಿ. ರಾಜು ಶೆಟ್ಟಿ, ಉಪಾಧ್ಯಕ್ಷರಾದ ಸುಧಾಕರ್ ಶೆಟ್ಟಿ ಮತ್ತು ಸಂಚಾಲಕರಾದ ಕಾವೆಂಶ್ರೀ ಉಪಸ್ಥಿತರಿದ್ದರು.

## ಸಮಸ್ಯೆಗಳನ್ನು ಸವಾಲಾಗಿ ಸ್ವೀಕರಿಸಿ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಜೀವನ ಎಂದ ಮೇಲೆ ಸಮಸ್ಯೆಗಳು ಬರುತ್ತವೆ. ಆದರೆ ಎದುರಾಗುವ ತೊಂದರೆಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸಿ ಮುನ್ನಡೆಯಬೇಕು ಎಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಜಾನಪದ ತಜ್ಞ ಡಾ.ಶಂಭು ಬಳಿಗಾರ ಹೇಳಿದರು.

ತಾಲ್ಲೂಕಿನ ಶಿಗ್ಲಿಯ ಸರ್ಕಾರಿ ಮಾದರಿ ಪ್ರಾಥಮಿಕ ಕನ್ನಡ ಹೆಣ್ಣು ಮಕ್ಕಳ ಶಾಲೆಯಲ್ಲಿ ಜಿಲ್ಲಾಮಟ್ಟದ ಮಕ್ಕಳ ಸಾಹಿತ್ಯ ಸಂಭ್ರಮ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಹಳ್ಳಿಗಳಲ್ಲಿ ಕೃಷಿ ನಶಿಸುತ್ತಿರುವುದು ದುಃಖದ ಸಂಗತಿ. ರೈತರೇ ಹಾಲು, ಮೊಸರು ಖರೀದಿಸುವ ಪರಿಸ್ಥಿತಿ ನಿರ್ಮಾಣವಾಗಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಸಾಹಿತ್ಯ, ಪರಂಪರೆ, ಪದ್ಧತಿಗಳನ್ನು ಆಚರಣೆಗೆ ತರುವ ಮೂಲಕ ಸಾಂಸ್ಕೃತಿಕ ವಾತಾವರಣ ನಿರ್ಮಾಣ ಮಾಡಬೇಕು ಎಂದರು.



ಲೋಕಾಯುಕ್ತ ಡಿವೈಎಸ್‌ಪಿ ಶಂಕರ ರಾಗಿ ಮಾತನಾಡಿ, ಯಾವುದೇ ಕೆಲಸ ಇರಲಿ, ನಿಷ್ಠೆಯಿಂದ ಮಾಡಿದಾಗ ಪ್ರಶಸ್ತಿ-ಪುರಸ್ಕಾರಗಳು ಹುಡುಕಿ ಬರುತ್ತವೆ. ಪ್ರಶಸ್ತಿಯನ್ನು ನಾವು ಬೆನ್ನತ್ತಬಾರದು. ಅವುಗಳೇ ನಮ್ಮನ್ನು ಹುಡುಕಿ ಬರುವಂತೆ ನಾವು ಕರ್ತವ್ಯ ನಿರ್ವಹಿಸಬೇಕು ಎಂದರು.

ಈ ಸಂದರ್ಭದಲ್ಲಿ ಎಸ್.ಪಿ. ಬಳಿಗಾರ, ಜಿಲ್ಲಾ ಮಸಾಪ ಅಧ್ಯಕ್ಷ ಡಾ.ರಾಜೇಂದ್ರ ಗಡಾದ, ಕಸಾಪ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ, ಬಿಇಓ ಜಿ.ಎಂ. ಮುಂದಿನಮನಿ, ರಾಜರತ್ನ ಹುಲಗೂರ, ಫಕ್ಕೀರೇಶ ಕಾಳಪ್ಪನವರ, ಆರ್.ಎಂ. ಹೊನಕೇರಿ, ಸಿ.ಆರ್. ಗೋಕಾವಿ, ರಾಮಣ್ಣ ಹುಲಗೂರ, ಅನುಷಾ ಹಿರೇಮಠ, ಈಶ್ವರ ಮೆಡ್ಲೇರಿ, ನಾಗರಾಜ ಹಣಗಿ, ಪ್ರವೀಣ ಹುಲಗೂರ, ಸಿ.ಜಿ. ಹಿರೇಮಠ, ಸೋಮಣ್ಣ ಡಾಣಗಲ್ಲ, ರಾಜು ರಜಪೂತ, ವೀರಣ್ಣ ಅಳ್ಳಳ್ಳಿ, ಮುಖ್ಯ ಶಿಕ್ಷಕ ಎ.ಡಿ. ಸೋಮನಕಟ್ಟಿ, ವೀರಣ್ಣ ಅಕ್ಕೂರ, ಅಮರೇಶ್ವರ ಹುಲಗೂರ, ಎನ್.ಎಂ. ಅರಳಿ, ಎಂ.ಸಿ. ಗೋಣೆಪ್ಪನವರ, ಮಂಜುನಾಥ ಶಂಭೋಜಿ, ಶಿವಾನಂದ ಗಿಡ್ನಂದಿ ಮತ್ತಿತರರು ಇದ್ದರು.

## ಬಡ್ಡಿ ದಂಧೆಕೋರರ ವಿರುದ್ಧ ವಿಶೇಷ ಕಾನೂನು ರಚಿಸಿ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಬಡ್ಡಿ ದಂಧೆಕೋರರ ವಿರುದ್ಧ ವಿಶೇಷ ಕಾನೂನು ರಚಿಸಿ ಬಡ್ಡಿ ದಂಧೆಗೆ ಅಂತ್ಯ ಹಾಡಬೇಕೆಂದು ವೆಲ್ಫೇರ್ ಪಾರ್ಟಿ ಆಫ್ ಇಂಡಿಯಾದ ಕರ್ನಾಟಕ ರಾಜ್ಯಾಧ್ಯಕ್ಷ ತಾಹೇರ್ ಹುಸೇನ್ ಸರಕಾರವನ್ನು ಒತ್ತಾಯಿಸಿದ್ದಾರೆ.

ತುಮಕೂರಿನಲ್ಲಿ ಇತ್ತೀಚೆಗೆ ಒಂದು ಕುಟುಂಬದ ಐವರು ಬಲಿಯಾದ ಘಟನೆಗೆ ಬಡ್ಡಿ ಮಾಫಿಯಾ ಕಾರಣ ಎನ್ನಲಾಗುತ್ತಿದೆ. ಈ ಬಡ್ಡಿ ದಂಧೆಯ ಕೂಪಕ್ಕೆ ಸಿಲುಕಿ ಅದೆಷ್ಟೋ ಸಾವುಗಳು ರಾಜ್ಯದಲ್ಲಿ ಸಂಭವಿಸುತ್ತಿವೆ. ರೈತರು, ಬಡ ವ್ಯಾಪಾರಸ್ಥರು ಈ ದಂಧೆಗೆ ಬಲಿಯಾಗುತ್ತಿದ್ದಾರೆ. ಈ ಪಿಡುಗಿಗೆ ತಡೆ ಹಾಕಲು ವಿಶೇಷ ಕಾನೂನು ತರುವ ಅಗತ್ಯವಿದೆ. ಮುಖ್ಯಮಂತ್ರಿಗಳು ಇದನ್ನು ಗಂಭೀರವಾಗಿ ಪರಿಗಣಿಸಿ ಮಟ್ಟ ಹಾಕಲು ಪ್ರಯತ್ನಿಸಬೇಕು. ಬಡ್ಡಿ ಮಾಫಿಯಾ ನಡೆಸುವ ದಬ್ಬಾಳಿಕೆಗೆ ಶೀಘ್ರವಾಗಿ ತಡೆ ಹಾಕಬೇಕು ಎಂದು ಅವರು ಆಗ್ರಹಿಸಿದ್ದಾರೆ.

## ಇಂದು ಅತಿಥಿ ಉಪನ್ಯಾಸಕರ ಪ್ರತಿಭಟನಾ ಮೆರವಣಿಗೆ

■ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಸೇವಾ ಕಾಯಂಗೆ ಆಗ್ರಹಿಸಿ ಹಲವು ದಿನಗಳಿಂದ ಅನಿರ್ದಿಷ್ಟಾವಧಿ ಧರಣಿ ನಡೆಸುತ್ತಿರುವ ಅತಿಥಿ ಉಪನ್ಯಾಸಕರು ಡಿಸೆಂಬರ್ 1ರ ಶುಕ್ರವಾರ ಬೆಳಗ್ಗೆ 10 ಗಂಟೆಗೆ ನಗರದ ಅಶೋಕ ಸರ್ಕಲ್‌ನಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಲಿದ್ದಾರೆ ಎಂದು ಸಂಘಟನೆಯ ಜಿಲ್ಲಾಧ್ಯಕ್ಷ ಡಾ.ವೀರಣ್ಣ ಸಜ್ಜನರ್ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆಯ ನೀಎಇರುವ ಅವರು ಪ್ರತಿಭಟನಾ ಮೆರವಣಿಗೆಯಲ್ಲಿ ಜಿಲ್ಲೆಯ ಎಲ್ಲ ಪದವಿ ಕಾಲೇಜುಗಳ ಸುಮಾರು 350ಕ್ಕೂ ಅಧಿಕ ಅತಿಥಿ ಉಪನ್ಯಾಸಕರು ಪಾಲ್ಗೊಳ್ಳುವರು. ಸಂಘಟನೆಯ ರಾಜ್ಯಾಧ್ಯಕ್ಷ ಡಾ.ಹನುಮಂತಗೌಡ ಆರ್.ಕಲ್ಮನಿ ಮತ್ತು ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ.ವಿನೋದ ಚಂದ ಪೀಟರ್ ಮೆರವಣಿಗೆಗೆ ಚಾಲನೆ ನೀಡುವರು. ಮೆರವಣಿಗೆ ಆರಂಭಕ್ಕೂ ಮುನ್ನ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿಯವರು ಧರಣಿ ಸ್ಥಳಕ್ಕೆ ಆಗಮಿಸಿ ಮನವಿ ಸ್ವೀಕರಿಸಲಿದ್ದಾರೆ. ಜಿಲ್ಲೆಯ ಎಲ್ಲ ಅತಿಥಿ ಉಪನ್ಯಾಸಕರು ಶುಕ್ರವಾರ ಬೆಳಗ್ಗೆ 9ಕ್ಕೆ ಕೊಪ್ಪಳದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ಸೇರುವಂತೆ ಕೋರಿದ್ದಾರೆ.



■ವಿಜಯಸಾಕ್ಷಿ ಸುದ್ದಿ, ಗದಗ

ಶ್ರೀ ಕಾಳಿದಾಸ ಶಿಕ್ಷಣ ಸಮಿತಿಯ ಶ್ರೀ ರಾಕೇಶ ಸಿದ್ದರಾಮಯ್ಯ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಭಕ್ತ ಕನಕದಾಸರ 515ನೇ ಜಯಂತ್ಯುತ್ಸವ ಸಮಾರಂಭ ಜರುಗಿತು. ಸಮಾರಂಭದಲ್ಲಿ ಸಂಸ್ಥೆಯ ಆಡಳಿತಾಧಿಕಾರಿ ರಾಮಕೃಷ್ಣ ರೊಳ್ಳಿ, ಪ್ರಾಚಾರ್ಯ ರಾಮೇಶ ವಡವಿ, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

### ಶಿವಾನುಭವ ಕಾರ್ಯಕ್ರಮದಲ್ಲಿ ಡಾ. ತೋಂಟದ ಸಿದ್ಧರಾಮ ಶ್ರೀಗಳು

# ಕನ್ನಡ ಭಾಷೆ ಸಮೃದ್ಧ, ಸುಂದರ

■ವಿಜಯಸಾಕ್ಷಿ ಸುದ್ದಿ, ಗದಗ

ನಮ್ಮ ದೇಶದಲ್ಲಿ ನೂರಾರು ಭಾಷೆಗಳಿವೆ, ಸಾವಿರಾರು ಜಾತಿಗಳಿವೆ. ಕನ್ನಡ ಸಾಹಿತ್ಯ ಭಾರತೀಯ ಸಾಹಿತ್ಯಗಳಲ್ಲಿ ಉತ್ಕೃಷ್ಟತೆಯನ್ನು ಮತ್ತು ವಿಶಿಷ್ಟತೆಯನ್ನು ಹೊಂದಿದೆ ಎಂದು ಡಾ. ತೋಂಟದ ಸಿದ್ಧರಾಮ ಶ್ರೀಗಳು ಹೇಳಿದರು.



ಲಿಂಗಾಯತ ಪ್ರಗತಿಶೀಲ ಸಂಘದ 2669ನೇ ಶಿವಾನುಭವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ಕನ್ನಡ ಭಾಷೆ ಬಹಳ ಸಮೃದ್ಧವಾಗಿರುವ ಭಾಷೆ. ಕನ್ನಡದ ಬಗ್ಗೆ ವಿಶೇಷ ಪ್ರೀತಿ, ಆದರ, ಅಭಿಮಾನವನ್ನು ಕನ್ನಡಿಗರು ಹೊಂದಬೇಕು. ಕರ್ನಾಟಕದಲ್ಲಿರುವ ಪ್ರತಿಯೊಬ್ಬರು ಕನ್ನಡವನ್ನು ಬಳಸಬೇಕು, ಬೆಳೆಸಬೇಕು, ಉಳಿಸಬೇಕು ಎಂದು ಶ್ರೀಗಳು ಹೇಳಿದರು.

ಕನ್ನಡದ ಸಾಹಿತಿಗಳಿಗೆ ಅತಿಹೆಚ್ಚು ಜ್ಞಾನಪೀಠ ಪ್ರಶಸ್ತಿಗಳು ಲಭಿಸಿವೆ. ಕನ್ನಡ ಭಾಷೆಯ ಸಾಹಿತಿಗಳೆಲ್ಲರೂ ವೈಜ್ಞಾನಿಕತೆಗೆ, ವೈಚಾರಿಕತೆಗೆ, ಮನೋವೈಜ್ಞಾನಿಕತೆಗೆ ಹೆಸರುವಾಸಿಯಾಗಿದ್ದಾರೆ. ನಮ್ಮ ಸಮಾಜದ ಮೊಟ್ಟಮೊದಲ ಬಂಡಾಯಗಾರರು ಬಸವಾದಿ ಶಿವಶರಣರು ಎಂದರೆ ಅತಿಶಯೋಕ್ತಿಯಲ್ಲ. 12ನೇ ಶತಮಾನದಲ್ಲಿ ಶೋಷಣೆ, ಜಾತಿ-ಮತ-ಪಂಥ ಭೇದ, ಲಿಂಗಭೇದದ ವಿರುದ್ಧ ಬಹುದೊಡ್ಡ ಸಮಾಜೋಧಾರ್ಮಿಕ ಚಳುವಳಿ ಮಾಡಿದ್ದಾರೆ. ವಚನ ಸಾಹಿತ್ಯವೆಲ್ಲವೂ ಮಾನವೀಯ ಮೌಲ್ಯಗಳಿಂದ ತುಂಬಿದ್ದು, ಸಮಾಜ ಪರಿವರ್ತನೆ ಮತ್ತು ಸಮಾನತೆ ತರುವ ಸಾಹಿತ್ಯ. ಕಾಯಕ-ದಾಸೋಹ ತತ್ತ್ವಗಳ ಮೂಲಕ ಸಮಾಜದಲ್ಲಿ ಸಂತೃಪ್ತಿ, ಸಮೃದ್ಧಿಯನ್ನು ಸಾಧಿಸಲು ವಚನ ಸಾಹಿತ್ಯ ಬಹಳ ಮುಖ್ಯ ಎಂದು ತಿಳಿಸಿದರು.

ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ಅಧ್ಯಕ್ಷ ಈಶ್ವರಪ್ಪ ಸಿ.ಮುನವಳ್ಳಿ, ಉಪಾಧ್ಯಕ್ಷ ತಾತನಗೌಡ ಎಸ್.ಪಾಟೀಲ, ಶರಣಬಸಪ್ಪ ಎಸ್. ಗುಡಿಮನಿ, ಗೌರವ ಕಾರ್ಯದರ್ಶಿ ಪ್ರಕಾಶ ಎಸ್.ಉಗಲಾಟದ, ಸಹ ಗೌರವ ಕಾರ್ಯದರ್ಶಿ ರಾಜಣ್ಣಾ ಬಿ.ಮಲ್ಲಾಡದ, ಸದಾಶಿವಯ್ಯ ಎಸ್. ಮದರಿಮಠ, ಕೋಶಾಧ್ಯಕ್ಷ ಅಶೋಕ ಕೆ.ಪಾಟೀಲ ಇವರನ್ನು ಪೂಜ್ಯರು ಸಂಮಾನಿಸಿದರು.

ಸಮ್ಮುಖವನ್ನು ಹೂವಿನ ಹಡಗಲಿಯ ಗವಿಮಠದ ಡಾ. ಹಿರಿಶಾಂತವೀರ ಸ್ವಾಮಿಜಿ, ಪೂಜ್ಯ ಬಸವಾನಂದ ಸ್ವಾಮಿಗಳು, ಬೆಳ್ಳೇರಿಯ ಹಿರಿಯ ಶಿವಾನಂದ ಸ್ವಾಮಿಗಳು ವಹಿಸಿದ್ದರು. ಮಾಜಿ ಸಚಿವರಾದ ಎಸ್.ಎಸ್. ಪಾಟೀಲ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಪೂಜಾ ಅಂಗಡಿ ಅವರಿಂದ ಗೀತಗಾಯನ ನಡೆಯಿತು. ಅಕ್ಷತಾ ಕೊಣ್ಣೂರು ವಚನಗಾಯನ ಹಾಡಿದರು. ಮೃತ್ಯುಂಜಯ ಹಿರೇಮಠ, ಗುರುನಾಥ ಸುತಾರ ಸಂಗಡಿಗರು ವಚನಸಂಗೀತ ಹಾಡಿದರು. ಪೂರ್ವಿಕಾ ಕೊಟ್ರಯ್ಯ ಹಿರೇಮಠ ಧರ್ಮಗ್ರಂಥ ಪಠಣಗೈದರು. ಭುವನ್ ಸುರೇಶ ವಸ್ತ್ರದ ಇವರಿಂದ ವಚನ ಚಿಂತನ ನಡೆಯಿತು. ಶಿವಾನುಭವ ಭಕ್ತಿಸೇವೆಯನ್ನು ವಹಿಸಿದ ನಾಗರತ್ನ ಮ.ಚನ್ನಳ್ಳಿ ಹಾಗೂ ಪರಿವಾರದವರನ್ನು ಶ್ರೀಗಳು ಸಂಮಾನಿಸಿದರು.

ಲಿಂಗಾಯತ ಪ್ರಗತಿಶೀಲ ಸಂಘದ ಅಧ್ಯಕ್ಷ ಶೇಖಣ್ಣ ಕಳಸಾಪೂರ ಸ್ವಾಗತಿಸಿದರು. ರತ್ನಕ್ಕ ಪಾಟೀಲ ಕಾರ್ಯಕ್ರಮ ನಿರೂಪಿಸಿದರು. ಉಪಾಧ್ಯಕ್ಷ ಬಾಲಚಂದ್ರ ಭರಮಗೌಡರ, ರೇಣುಕಾ ವಿ. ಕರೇಗೌಡ್ರ, ಕಾರ್ಯದರ್ಶಿ ಮಹೇಶ ಗಾಣಿಗೇರ, ಸಹಕಾರ್ಯದರ್ಶಿ ವಿಜಯಕುಮಾರ ಹಿರೇಮಠ, ವಿರುಪಾಕ್ಷಪ್ಪ ಅರಳಿ, ಸಂಘಟನಾ ಕಾರ್ಯದರ್ಶಿ ಅಶೋಕ ಹಾದಿ, ಕೋಶಾಧ್ಯಕ್ಷ ಸುರೇಶ ನಿಲೂಗಲ್, ಶಿವಾನುಭವ ಸಮಿತಿ ಚೇರಮನ್ ವಿವೇಕಾನಂದಗೌಡ ಪಾಟೀಲ ಉಪಸ್ಥಿತರಿದ್ದರು.

'ಕನ್ನಡ-ಕರ್ನಾಟಕ : ಹಿಂದಣ ವಾಸ್ತವಗಳು, ಮುಂದಣ ಅಪೇಕ್ಷೆಗಳು' ಕುರಿತು ಡಾ. ಅಮರೇಶ ನುಗಡೋಣಿ ಉಪನ್ಯಾಸ ನೀಡಿ, ಮಠಮಾನ್ಯಗಳು ಕನ್ನಡ ಭಾಷೆ, ಸಂಸ್ಕೃತಿ, ಸಾಹಿತ್ಯವನ್ನು ಉಳಿಸುವಲ್ಲಿ ಸಾಕಷ್ಟು ಶ್ರಮವಹಿಸುತ್ತಿವೆ. ಜಾಗತೀಕರಣದಲ್ಲಿ ಮಕ್ಕಳಿಗಿಂತಲೂ ಪಾಲಕರಿಗೆ ಇಂಗ್ಲೀಷ್, ಹಿಂದಿ ಭಾಷೆಗಳ ವ್ಯಾಮೋಹ ಹೆಚ್ಚುತ್ತಿದೆ. ಪೋಷಕರು, ಶಿಕ್ಷಕರು ಮಕ್ಕಳಿಗೆ ಕನ್ನಡವನ್ನು ಕಲಿಸಲು ಪ್ರಾಧಾನ್ಯತೆ ನೀಡಬೇಕು. ಬಾಳುವುದಕ್ಕೆ ಕನ್ನಡ ಕಲಿಯಲೇಬೇಕು. ಬದುಕುವುದಕ್ಕೆ ಇಂಗ್ಲೀಷ್ ಕಲಿತರೆ ಸಾಕು ಎಂದು ಅಭಿಪ್ರಾಯಪಟ್ಟರು.

## ಆಂಗ್ಲೋ ಉರ್ದು ಬಾಲಕಿಯರ ಪ್ರೌಢಶಾಲೆಯಲ್ಲಿ ಕನಕದಾಸ ಜಯಂತಿ




■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಆಂಗ್ಲೋ ಉರ್ದು ಬಾಲಕಿಯರ ಪ್ರೌಢಶಾಲೆಯಲ್ಲಿ ಕನಕದಾಸ ಜಯಂತಿಯನ್ನು ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಜನಾಬ ಎಲ್.ಆರ್. ಇಟಗಿ ಮಾತನಾಡಿ, ಕನಕದಾಸರು ಶ್ರೇಷ್ಠ ಕವಿಗಳಾಗಿ ಈ ನಾಡನ್ನು ಬೆಳಗಿದರು. ತಮ್ಮ ಕೀರ್ತನೆಗಳ ಮೂಲಕ ಜನರಲ್ಲಿದ್ದ ಮೌಢ್ಯವನ್ನು ದೂರ ಮಾಡಿದರು. ಇವರ ಆದರ್ಶಗಳು ಸದಾ ಅನುಕರಣೀಯವಾಗಿವೆ ಎಂದರು.

ಕಾರ್ಯಕ್ರಮದಲ್ಲಿ ಶಿಕ್ಷಕ-ಸಿಬ್ಬಂದಿ ವರ್ಗದವರು, ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ಎಂ.ಎ. ಕಮಾನಗಾರ ಸ್ವಾಗತಿಸಿದರು. ಶಿಕ್ಷಕ ಝುಡ್.ಎ. ಮುಲ್ಲಾ ನಿರೂಪಿಸಿದರು. ಎಂ.ಎಚ್. ಜಮಾಲಸಾಬನವರ ವಂದಿಸಿದರು.

## 'ನೇತ್ರಂ' ಚಿತ್ರದ ನಾಯಕ ದಕ್ಷ ಗರಗಗೆ ಸನ್ಮಾನ



■ವಿಜಯಸಾಕ್ಷಿ ಸುದ್ದಿ, ಗದಗ

'ನೇತ್ರಂ' ಕನ್ನಡ ಚಲನಚಿತ್ರದಲ್ಲಿ ನಾಯಕನಾಗಿ ಅಭಿನಯಸಿರುವ ದಕ್ಷ ಗರಗ ಅವರನ್ನು ಗದಗ ಜಿಲ್ಲಾ ಜೈ ಭೀಮ ಸಂಘರ್ಷ ಸಮಿತಿ ಅಧ್ಯಕ್ಷ ಗಣೇಶ ವಾಯ್.ಹುಬ್ಬಳ್ಳಿ ನೇತೃತ್ವದಲ್ಲಿ ಡಾ. ಬಿ.ಆರ್. ಅಂಬೇಡ್ಕರ ಅವರ ಭಾವಚಿತ್ರ ನೀಡಿ ಸನ್ಮಾನಿಸಿ ಗೌರವಿಸಿದರು.

ಈ ಸಂದರ್ಭದಲ್ಲಿ ಸಮಿತಿಯ ಉಪಾಧ್ಯಕ್ಷ ಮಂಜುನಾಥ ಎಫ್.ತೌಜಲ್, ರೋಣ ತಾಲೂಕಾಧ್ಯಕ್ಷ ಬಸವರಾಜ ಬದಾಮಿ, ಅಲ್ಪಸಂಖ್ಯಾತರ ಘಟಕದ ಜಿಲ್ಲಾಧ್ಯಕ್ಷ ರಾಷ್ಟ್ರೀನ್ ಜೋಸೆಪ್, ಅಲ್ಪಸಂಖ್ಯಾತರ ಘಟಕದ ಜಿಲ್ಲಾ ಉಪಾಧ್ಯಕ್ಷ ರಾಜೇಶ ವಿ. ಶೆಟ್ಟರ್, ಸಹ-ಕಾರ್ಯದರ್ಶಿ ಶಿವಣ್ಣ ಕಡಿವಾಲ, ದಲಿತ ಯುವ ನಾಯಕ ಯುವರಾಜ ಬಳ್ಳಾರಿ, ಹೇಮಂತ ಹುಬ್ಬಳ್ಳಿ, ಶ್ರೀಕಾಂತ ಹಲವಾಗಲಿ, ಯಶವಂತ ಹುಬ್ಬಳ್ಳಿ, ಚಾರು ಹೆಚ್.ರಾಮಗಿರಿ, ಮಡಿವಾಳ ಮುಖಂಡರಾದ ಕೃಷ್ಣಪ್ಪ ಮಡಿವಾಳರ ಉಪಸ್ಥಿತರಿದ್ದರು.

### 37ನೇ ರಾಷ್ಟ್ರೀಯ ಕ್ರೀಡಾಕೂಟ-ಸ್ಕ್ವಾಯ್ (ಸಮರಕಲೆ) ವಯಕ್ತಿಕ ವಿಭಾಗದಲ್ಲಿ ಪ್ರಶಸ್ತಿ

# ಕರ್ನಾಟಕಕ್ಕೆ ಕಂಚು ತಂದ ಅಣ್ಣಿಗೇರಿಯ ಹುಡುಗ

■ವಿಜಯಸಾಕ್ಷಿ ಸುದ್ದಿ, ಅಣ್ಣಿಗೇರಿ

ಭಾರತೀಯ ಓಲಂಪಿಕ್ ಅಸೋಸಿಯೇಷನ್ ಹಾಗೂ ಗೋವಾ ಕ್ರೀಡಾ ಪ್ರಾಧಿಕಾರ ಗೋವಾದಲ್ಲಿ ಆಯೋಜಿಸಿದ್ದ 37ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಸ್ಕ್ವಾಯ್ (ಸಮರ ಕಲೆ) ಕ್ರೀಡೆಯ ವಯಕ್ತಿಕ ವಿಭಾಗದಲ್ಲಿ ಧಾರವಾಡ ಜಿಲ್ಲೆ ಅಣ್ಣಿಗೇರಿಯ ಕ್ರೀಡಾಪಟು ಗಣೇಶ ವೀ. ಶಾನುಭೋಗರ ಕಂಚಿನ ಪದಕ ಪಡೆಯುವುದರ ಮೂಲಕ ಗೆಲುವಿನ ನಗೆ ಬೀರಿದ್ದಾರೆ.



50 ಕೆಜಿ ತೂಕದ ಒಳಗಿನ ಸ್ಪರ್ಧಿಗಳಿಗಾಗಿ ಇರುವ ಈ ಸ್ಪರ್ಧೆಯಲ್ಲಿ ರಾಜಸ್ಥಾನ ಸ್ಪರ್ಧಿಯನ್ನು 2 ಅಂಕದಿಂದ ಸೋಲಿಸಿ ಗಣೇಶ ಗೆಲುವನ್ನು ತಮ್ಮದಾಗಿಸಿಕೊಂಡರು.

ಮುಂದಿನ ಹಂತದಲ್ಲಿ ಆಂಧ್ರಪ್ರದೇಶದ ಸ್ಪರ್ಧಿಯ ವಿರುದ್ಧ ಸಮಬಲ ಸ್ಪರ್ಧೆ ನೀಡಿದರು.

ಆದರೆ ಅಚಾತುರ್ಯದಿಂದ ಆಂಧ್ರಪ್ರದೇಶದ ಸ್ಪರ್ಧಿಗೆ ಒಂದು ಅಂಕ ಹೆಚ್ಚಿಗೆ ನೀಡಲಾಯಿತು. ಇದರ ವಿರುದ್ಧ ಗಣೇಶ ಆಕ್ಷೇಪ ಎತ್ತಿದರು. ಆದರೆ ಈ ಆಕ್ಷೇಪ ನಿಗದಿತ ಸಮಯದಲ್ಲಿ ಸಲ್ಲಿಸಲಿಲ್ಲ ಎನ್ನುವ ಕಾರಣದಿಂದ ಅವರ ಮನವಿಯನ್ನು ಸ್ಪರ್ಧೆಯ ಮುಖ್ಯಸ್ಥರು ಪುರಸ್ಕರಿಸಲಿಲ್ಲ.

ಕಾಶ್ಮೀರದಲ್ಲಿ ಹುಟ್ಟಿದ ಈ ಸ್ಕ್ವಾಯ್ ಸಮರಕಲೆ ಕುರಿತು ಭಾರತೀಯ ಸ್ಕ್ವಾಯ್ ಅಸೋಸಿಯೇಷನ್ ರಾಷ್ಟ್ರಮಟ್ಟದಲ್ಲಿ ಜಮ್ಮುವಿನಲ್ಲಿ ಆಯೋಜಿಸಿದ್ದ ಸ್ಪರ್ಧೆಯಲ್ಲಿ ಬೆಳ್ಳಿ ಪದಕ, ಏಕ್ ಭಾರತ ಶ್ರೇಷ್ಠ ಭಾರತ ಯೋಜನೆ ಅಡಿ ಹರಿಯಾಣದಲ್ಲಿ ಆಯೋಜಿಸಿದ್ದ ಸ್ಪರ್ಧೆಯಲ್ಲಿ ಗಣೇಶ ಕಂಚಿನ ಪದಕ ಪಡೆದಿದ್ದರು.

ಈಗ ಮತ್ತೆ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಗಣೇಶ ಶಾನುಭೋಗರ ತಮ್ಮ ಗೆಲುವಿನ ಮೂಲಕ ಕರ್ನಾಟಕಕ್ಕೆ ಕಂಚಿನ ಪದಕ ತಂದ ಹಿನ್ನೆಲೆಯಲ್ಲಿ ಅವರು ತರಬೇತಿ ಪಡೆದ ಅಣ್ಣಿಗೇರಿಯ ಧಾರವಾಡ ಜಿಲ್ಲಾ ಸ್ಕ್ವಾಯ್ ಅಸೋಸಿಯೇಷನ್ ಹಾಗೂ ಗೋಲ್ಡನ್ ಕರಾಟೆ ಕ್ಲಬ್‌ನ ಗುರು, ತರಬೇತುದಾರ ಗಣೇಶ ಇಳಕಲ್, ಕರ್ನಾಟಕ ಸರಕಾರ ಕ್ರೀಡಾ ಇಲಾಖೆ ಸ್ಕ್ವಾಯ್ ವಿಭಾಗದ ಕಾರ್ಯದರ್ಶಿ ಮಹಮ್ಮದ್ ಅಲಿ, ಸ್ಕ್ವಾಯ್ ಅಸೋಸಿಯೇಷನ್ ಫೆಡರೇಶನ್ ಗ್ರ್ಯಾಂಡ್ ಮಾಸ್ಟರ್ ಮೀರ್ ನಜೀರ್, ಸ್ಕ್ವಾಯ್ ಹಾಗೂ ಕರಾಟೆ ಸಂಸ್ಥೆಯ ಅಧ್ಯಕ್ಷರಾದ ಲಕ್ಷ್ಮಣ ನಾಯಕ ಮತ್ತು ಸಿ.ಜಿ. ನಾವಳ್ಳಿ ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ. ಗಣೇಶ ಶಾನುಭೋಗರ ಹಿರಿಯ ಪತ್ರಕರ್ತ ವೀರೇಶ ಶಾನುಭೋಗರ ಅವರ ಪುತ್ರರಾಗಿದ್ದಾರೆ.

## ಕಾಂಗ್ರೆಸ್ ಸರ್ಕಾರ ಜಾತಿ-ಜಾತಿಗಳ ನಡುವೆ ಬೆಂಕಿ ಹಚ್ಚುತ್ತಿದೆ

▶▶ಮೊದಲನೇ ಪುಟದಿಂದ

ತಾನು ಹೇಳಿದ್ದೇ ಮಾತು, ಆಡಿದ್ದೇ ಆಟ ಎಂಬ ಮನೋಭಾವನೆಯಿಂದ ಮುಖ್ಯಮಂತ್ರಿಗಳು ಹೊರಬರಲಿ ಎಂದರು. ನೀವು ಜಾತಿ-ಜಾತಿ ನಡುವೆ ಬೆಂಕಿ ಹಚ್ಚುತ್ತೀರಿ ಎಂದು ನಾನು ಅಂದೇ ಹೇಳಿದ್ದೆ. ನಾವು ಹಿಂದುಳಿದವರ, ದಲಿತರ ಪರ ಎಂದಿದ್ದರು. ತಾಕತ್ತಿದ್ದರೆ, ಆ ವರದಿಯನ್ನು ಬಿಡುಗಡೆ ಮಾಡಿ ಆಡಳಿತ ನಡೆಸಲಿ ನೋಡೋಣ ಎಂದು ಸವಾಲು ಹಾಕಿದರಲ್ಲದೆ, ಒಂದು ಕಡೆ ಲಿಂಗಾಯತರು, ಮತ್ತೊಂದು ಕಡೆ ಒಕ್ಕಲಿಗರು ಅಸಮಾಧಾನಗೊಂಡರು. ಇಡೀ ಸಮಾಜವನ್ನೇ ಛಿದ್ರಗೊಳಿಸಿಬಿಟ್ಟಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಇಂದು ಇಡೀ ವಿಶ್ವವೇ ಪ್ರಧಾನಿ ನರೇಂದ್ರ ಮೋದಿಯವರ ಕಾಲಿಗೆ ಬೀಳುತ್ತಿದೆ. ಪ್ರೀತಿಯಿಂದ ಬಾಚಿ ತಬ್ಬಿಕೊಳ್ಳುತ್ತಿದ್ದಾರೆ. ಅಂಥ ಸುಸಂಸ್ಕೃತ ವ್ಯಕ್ತಿ, ವಿಶ್ವ ನಾಯಕನಿಗೆ 'ಗಿರಾಕಿ' ಎನ್ನುವ ಇವರ ನಾಲಿಗೆಗೆ ಏನಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ ಸೇರಿದಂತೆ ಬಿಜೆಪಿ ಮುಖಂಡರು ಪತ್ರಿಕಾಗೋಷ್ಠಿಯಲ್ಲಿದ್ದರು.

## ಗದಗ ಜಿಲ್ಲಾ ಜೆಡಿಎಸ್ ಪದಾಧಿಕಾರಿಗಳ ಸಭೆ



■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ನಿರೀಕ್ಷಣಾ ಮಂದಿರದಲ್ಲಿ ಗದಗ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಎಮ್.ವಾಯ್. ಮುಧೋಳ ಅವರ ನೇತೃತ್ವದಲ್ಲಿ ಗದಗ ಜಿಲ್ಲಾ ಘಟಕದ ಪದಾಧಿಕಾರಿಗಳ ಆಯ್ಕೆ ಮಾಡುವ ಕುರಿತು ನಡೆದ ಸಭೆಯಲ್ಲಿ ಎಲ್ಲಾ ಮುಖಂಡರು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ, ಪದಾಧಿಕಾರಿಗಳ ಆಯ್ಕೆಗೆ ಅರ್ಜಿಯನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ಜೆಡಿಎಸ್ ಗದಗ ಜಿಲ್ಲಾ ಕಾರ್ಯಾಧ್ಯಕ್ಷ ಸಿ.ಎಸ್. ಪಾಟೀಲ್, ಶಿರಹಟ್ಟಿ ಕ್ಷೇತ್ರದ ಅಧ್ಯಕ್ಷ ಶಂಕರ್ ಬಾಳಿಕಾಯಿ, ಲಕ್ಷ್ಮೇಶ್ವರ ಪುರಸಭೆ ಸದಸ್ಯ ಪ್ರವೀಣ್ ಬಾಳಿಕಾಯಿ, ಜಿಲ್ಲಾ ಮುಖಂಡರಾದ ವೆಂಕನಗೌಡ ಗೋವಿಂದಗೌಡ್ರ, ಬಸವರಾಜ ಅಪ್ಪಣ್ಣವರ, ಹಾಜಿಅಲಿ ಕೊಪ್ಪಳ, ಸುಭಾಷಚಂದ್ರ ದಾನರೆಡ್ಡಿ, ಮಂಜುಳಾ ಮೇಟಿ, ಎಂ.ಎಸ್. ಪರ್ವತಗೌಡ್ರು, ಸಿರಾಜ್ ಕದಡಿ, ಶಿರಾಜ್ ಕಲೆಬಾವಿ, ಲಕ್ಷ್ಮಣ್ ನಾಯಕ್, ರಾಜೇಸಾಬ್ ತಹಸೀಲ್ದಾರ್, ದೇವಪ್ಪ ಮಲಸಮುದ್ರ ಸೇರಿದಂತೆ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.



■ವಿಜಯಸಾಕ್ಷಿ ಸುದ್ದಿ, ಬೆಟಗೇರಿ

ನಗರದ ಮಹಾರಾಣಾ ಶಿಕ್ಷಣ ಸಂಸ್ಥೆಯಲ್ಲಿ ದಾಸ ಶ್ರೇಷ್ಠ ಭಕ್ತ ಕನಕದಾಸರ ಜಯಂತಿಯನ್ನು ಆಚರಿಸಲಾಯಿತು. ಶಿಕ್ಷಣ ಸಂಸ್ಥೆಯ ಸಂಸ್ಥಾಪಕರಾದ ಗಣೇಶಸಿಂಗ ಬ್ಯಾಳಿಯವರು ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಮುಖ್ಯಾಧ್ಯಾಪಕ ಎಸ್.ಎಸ್. ಬಡಿಗೇರ, ಪ್ರಾಚಾರ್ಯ ಎ.ಎ. ಹದ್ಲಿ, ಸಮಸ್ತ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಕನಕದಾಸರ ತತ್ವಾದರ್ಶಗಳನ್ನು ಮೈಗೂಡಿಸಿಕೊಳ್ಳಿ

■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಜನಮನ ಮುಟ್ಟುವ ಸರಳ ಕೀರ್ತನೆಗಳ ಮೂಲಕ ಜನತೆಯನ್ನು ಜಾಗೃತಗೊಳಿಸಿದ ಕನಕದಾಸರ ತತ್ವಾದರ್ಶಗಳನ್ನು ಪ್ರತಿಯೊಬ್ಬರೂ ಮೈಗೂಡಿಸಿಕೊಳ್ಳಬೇಕು ಎಂದು ಪುರಸಭೆ ಸದಸ್ಯ ರಾಜು ಸಾಂಗ್ಲೀಕರ ಅಭಿಪ್ರಾಯಪಟ್ಟರು.



ಇಲ್ಲಿನ ಪುರಸಭೆ ಸಭಾ ಭವನದಲ್ಲಿ ಗುರುವಾರ ನಡೆದ ಕನಕದಾಸರ 536ನೇ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕನಕದಾಸರು ಮೇಲು-ಕೀಳು, ಬಡವ-ಬಲ್ಲಿದ ಎನ್ನುವ ಕಲುಷಿತ ವಾತಾವರಣವನ್ನು ತಿಳಿಗೊಳಿಸಲು ಶ್ರಮಿಸಿದವರು ಎಂದರು.

ಕೆಪಿಸಿಸಿ ಹಿಂದುಳಿದ ವಿಭಾಗದ ರಾಜ್ಯ ಉಪಾಧ್ಯಕ್ಷ ಎಚ್.ಎಸ್. ಸೋಂಪುರ ಮಾತನಾಡಿ, 12ನೇ ಶತಮಾನದ ರಾಜಮನೆತನದಲ್ಲಿ ಹುಟ್ಟಿದರೂ ಕನಕದಾಸರು ತಮ್ಮ ವೈಭವಗಳನ್ನೆಲ್ಲ ತೊರೆದು ಜನಸಾಮಾನ್ಯರ ನೋವು-ನಲಿವುಗಳಿಗೆ ಸ್ಪಂದಿಸುತ್ತಾ, ಸಮಾಜದ ಅಂಕು-ಡೊಂಕುಗಳನ್ನು ತಿದ್ದುತ್ತಾ, ಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಂಡ ಮಹಾನ್ ಜ್ಞಾನಿಯಾಗಿದ್ದರು. ಮೊದಲು ತಿಮ್ಮಪ್ಪನಾಗಿ ಆಡುತ್ತಾ ಬೆಳೆದು, ಬಳಿಕ ತಿಮ್ಮಪ್ಪ ನಾಯಕನಾಗಿ ಆಡಳಿತ ನಡೆಸುವ ಸಂದರ್ಭದಲ್ಲಿ ಯುದ್ಧದಲ್ಲಿನ ಸೈನಿಕರ ಸಾವು-ನೋವುಗಳನ್ನು ಕಂಡ ಕನಕದಾಸರು ವೈಭವದ ಜೀವನವನ್ನು ತೊ-ರೆದರು. ದಾಸಶ್ರೇಷ್ಠ ಭಕ್ತನಾಗಿ, ಕನಕದಾಸರಾಗಿ, ಜಗವನ್ನು ಬೆಳಗಿದರು ಎಂದರು.

ಪುರಸಭೆ ಸ್ಥಾಯಿ ಸಮಿತಿ ಚೇರಮನ್ ಕನಕಪ್ಪ ಅರಳಿಗಿಡದ, ಪುರಸಭೆ ಸದಸ್ಯರಾದ ಮುದಿಯಪ್ಪ ಮುಧೋಳ, ಮೂಕಪ್ಪ ನಿಡಗುಂದಿ, ಯಮನೂರ ತಿರಕೋಜಿ, ಶರಣಪ್ಪ ಉಪ್ಪಿನಬೆಟಗೇರಿ, ಹಾಲುಮತ ಸಮಾಜದ ಮುಖಂಡರಾದ ನಾಗಣ್ಣ ಲಕ್ಕಲಕಟ್ಟಿ, ಶರಣು ಕಂಬಳಿ, ಎಸ್.ಬಿ. ಜೂಲಗುಡ್ಡ, ಎಂ.ಬಿ. ಸೋಂಪುರ, ನಿಂಗಪ್ಪ ಮಾಸ್ತಿ, ಮಂಜುನಾಥ ಬೆಕನವಾರಿ, ಕೆ.ಎಸ್. ರಾಜೂರ, ಎಸ್.ಡಿ. ಕುರಿ, ಅಶೋಕ ವದೆಗೋಳ, ಪುರಸಭೆಯ ಬಿ.ಮಲ್ಲಿಕಾರ್ಜುನಯ್ಯ, ಗುರಪ್ಪ ಪಟ್ಟಣಶೆಟ್ಟಿ, ಪಿ.ಎಸ್. ದೊಡ್ಡಮನಿ, ರಿಯಾಜ ಒಂಟಿ, ಅಜ್ಜಪ್ಪ ನೀಲಿ, ಮೈಬು ಚಾಮಲಾಪೂರ ಮುಂತಾದವರಿದ್ದರು.

# ಆಂಗ್ಲೋ ಉರ್ದು ಶಾಲೆಯಲ್ಲಿ ಕನಕ ಜಯಂತಿ ಆಚರಣೆ




■ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ಆಂಗ್ಲೋ ಉರ್ದು ಬಾಲಕರ ಪ್ರೌಢಶಾಲೆಯಲ್ಲಿ ಶ್ರೀ ಭಕ್ತ ಕನಕದಾಸರ ಜಯಂತಿಯನ್ನು ಆಚರಿಸಲಾಯಿತು. ಎಫ್.ಎಂ. ಢಾಲಾಯತ ಪ್ರಾಸ್ತಾವಿಕವಾಗಿ ಮಾತನಾಡಿ, ಶ್ರೀ ಕನಕದಾಸರು ಭಕ್ತಿ ಪಂಥದ ಮುಖ್ಯ ಹರಿದಾಸರಲ್ಲಿ ಒಬ್ಬರು. ದಾಸ ಪರಂಪರೆಯಲ್ಲಿ ಬರುವ 250ಕ್ಕೂ ಹೆಚ್ಚು ದಾಸರಲ್ಲಿ ಕನಕದಾಸರೊಬ್ಬರೇ ಶೂದ್ರದಾಸರು. ಕನಕದಾಸರು ಮತ್ತು ಪುರಂದರದಾಸರನ್ನು ಕರ್ನಾಟಕ ಕೀರ್ತನ ಸಾಹಿತ್ಯದ ಅಶ್ವಿನಿ ದೇವತೆಗಳೆಂದು ಬಣ್ಣಿಸಲಾಗಿದೆ. ಕನಕದಾಸರು ದಂಡನಾಯಕರಾಗಿದ್ದು ಯುದ್ಧವೊಂದರಲ್ಲಿ ಸೋತ ಅವರಿಗೆ ವೈರಾಗ್ಯ ಉಂಟಾಗಿ, ಹರಿಭಕ್ತರಾದರು ಎಂದರು.

ಎಸ್.ಆಯ್. ನದಾಫ ಸ್ವಾಗತಿಸಿದರು. ಎಂ.ಎಂ. ಪೀರಜಾದೆ ಕಾರ್ಯಕ್ರಮ ನಿರೂಪಿಸಿದರು. ಎಂ.ಎ. ರಿಕಾರ್ಟಿ ವಂದಿಸಿದರು. ಶಾಲೆಯ ಮುಖ್ಯೋಪಾಧ್ಯಾಯೆ ಎನ್.ಎ. ನವಲಗುಂದ, ಶಾಲಾ ಸಿಬ್ಬಂದಿವರ್ಗದವರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

### ಚಿದಂಬರೇಶ್ವರರ ಜನ್ಮೋತ್ಸವ ಕಾರ್ಯಕ್ರಮದ ಪ್ರಯುಕ್ತ ರಕ್ತದಾನ ಶಿಬಿರ

# ಪ್ರತಿಯೊಬ್ಬರೂ ರಕ್ತದಾನದ ಮಹತ್ವ ಅರಿಯಿರಿ

■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಸಮೀಪದ ಸೂಡಿ ಗ್ರಾಮದ ಶಿವಚಿದಂಬರೇಶ್ವರ ದೇವಸ್ಥಾನದಲ್ಲಿ ಚಿದಂಬರೇಶ್ವರರ ಜನ್ಮೋತ್ಸವ ಪ್ರಯುಕ್ತ ಲೋಕ ಕಲ್ಯಾಣಾರ್ಥವಾಗಿ ಅತಿರುದ್ರ ಮಹಾಯಾಗದ ಪ್ರಯುಕ್ತ 3ನೇ ದಿನದ ಕಾರ್ಯಕ್ರಮದಲ್ಲಿ ಗುರುವಾರ ಸಂಕಷ್ಟಹರ ಚತುರ್ಥಿ ನಿಮಿತ್ತ ದೇವಸ್ಥಾನದಲ್ಲಿ ತ್ರಿಕಾಲ ಲಘು ರುದ್ರಾಭಿಷೇಕ ಶ್ರದ್ಧಾ-ಭಕ್ತಿಯಿಂದ ನೆರವೇರಿತು.

ತ್ರಿಕಾಲ ಲಘು ರುದ್ರಾಭಿಷೇಕದಲ್ಲಿ 150 ವೈದಿಕರು ಸಾಮೂಹಿಕ ರುದ್ರ ಪಠಿಸಿದರು. ಇದೇ ವೇಳೆ ರಕ್ತನಿಧಿ ಕೇಂದ್ರ ಜಿಲ್ಲಾ ಆಸ್ಪತ್ರೆ ಗದಗ ವತಿಯಿಂದ ರಕ್ತದಾನ ಶಿಬಿರ ನಡೆಯಿತು. ಭುಜಂಗಭಟ್ಟ ಜೋಶಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿ, ಜಗತ್ತಿನ ಎಲ್ಲ




ದಾನಗಳಲ್ಲಿ ರಕ್ತದಾನ ಶ್ರೇಷ್ಠವಾದದ್ದು. ರಕ್ತದಾನ ಪುಣ್ಯ ಕಾರ್ಯವಾಗಿದೆ. ಪ್ರತಿಯೊಬ್ಬರೂ ಇದರ ಮಹತ್ವವನ್ನು ಅರಿಯಬೇಕು. ರಕ್ತದಾನ ಮಾಡುವುದರ ಮೂಲಕ ವ್ಯಕ್ತಿಗೆ ಮರುಜೀವ ನೀಡಿದಂತಾಗುತ್ತದೆ.

ರಕ್ತದಾನ ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವಾಗಿದ್ದು, ತುರ್ತು ಸಂದರ್ಭಗಳಲ್ಲಿ ರಕ್ತದಾನದಿಂದ ಮಾತ್ರ ಜೀವ ಉಳಿಸಲು ಸಾಧ್ಯ. ಆದ್ದರಿಂದ ಸ್ವಯಂ ಪ್ರೇರಿತವಾಗಿ ರಕ್ತದಾನ ಮಾಡಲು ಯುವಕರು ಮುಂದೆ ಬರಬೇಕೆಂದು ಕರೆ ನೀಡಿದರು. ಡಾ.ಮಲ್ಲಿಕಾರ್ಜುನ ಪಟ್ಟಣಶೆಟ್ಟಿ ಮಾತನಾಡಿ, ಪ್ರತಿಯೊಬ್ಬರಿಗೂ ತಮ್ಮ ರಕ್ತದ ಗುಂಪಿನ ಬಗ್ಗೆ ತಿಳುವಳಿಕೆ ಇರುವುದು ಅತ್ಯಗತ್ಯ. ಇದರಿಂದ ರಕ್ತದಾನ ಮಾಡಲು ಹಾಗೂ ಪಡೆದುಕೊಳ್ಳಲು ಸಹಾಯಕವಾಗುತ್ತದೆ ಎಂದ ಅವರು, ರಕ್ತಕ್ಕೆ ಒಂದು ಜೀವವನ್ನು ಉಳಿಸುವ ಶಕ್ತಿಯಿದೆ. ಈ ಹಿನ್ನೆಲೆಯಲ್ಲಿ ಯುವ ಸಮೂಹ ರಕ್ತದಾನ ಮಾಡಲು ಮುಂದಾಗಬೇಕು.

ಲೋಕ ಕಲ್ಯಾಣಾರ್ಥವಾಗಿ ಡಿ.2, ಶನಿವಾರ ಬೆಳಿಗ್ಗೆ 9ಕ್ಕೆ ಅತಿ-ರುದ್ರ ಮಹಾಯಾಗ ಹಾಗೂ ಚಂಡಿಹೋಮ ನಡೆಯಲಿದ್ದು, ರುದ್ರಾಭಿಷೇಕದೊಂದಿಗೆ ಏಕಕಾಲದಲ್ಲಿ ಮಹಾಯಾಗ ನಡೆಯಲಿದೆ. ಅತಿರುದ್ರ ಮಹಾಯಾಗದಲ್ಲಿ ಮೂರು ಯಜ್ಞ ಕುಂಡಗಳನ್ನಿ ನಿರ್ಮಿಸಲಾಗಿದೆ. ಒಂದು ಹೋಮಕುಂಡದಲ್ಲಿ ಚಂಡಿಕಾಹೋಮ ಹಾಗೂ ಇನ್ನೆರಡು ಹೋಮ ಕುಂಡದಲ್ಲಿ ಅತಿರುದ್ರಹೋಮ ಪ್ರಾರಂಭವಾಗಲಿದೆ. ಮಹಾಯಾಗದಲ್ಲಿ ಸಕಲ ಸದ್ಭಕ್ತರು ಆಗಮಿಸಿ ಮಹಾಸ್ವಾಮಿಯ ಕೃಪೆಗೆ ಪಾತ್ರರಾಗಬೇಕು.

– ವೇ.ಮೂ. ಭುಜಂಗಶರ್ಮಾ ಜೋಶಿ.
ಯಾಜ್ಞವಲ್ಕ್ಯಾಶ್ರಮ, ಸೂಡಿ.

ಇದರಿಂದ ತಮ್ಮ ಆರೋಗ್ಯ ಉತ್ತಮವಾಗಿರುತ್ತದೆಯಲ್ಲದೆ, ಇನ್ನೊಂದು ಜೀವ ಉಳಿಸಿದ ತೃಪ್ತಿ ಪ್ರಾಪ್ತವಾಗುತ್ತದೆ. ಕನಿಷ್ಠ ಮೂರು ತಿಂಗಳಿಗೊಮ್ಮೆ ರಕ್ತದಾನ ಮಾಡಿದ ವ್ಯಕ್ತಿಯು ದೈಹಿಕವಾಗಿ ಕ್ರಿಯಾಶೀಲನಾಗಿರುತ್ತಾನೆ. ಆದರೆ, ಕೆಲವರಿಗೆ ರಕ್ತದಾನ ಮಾಡುವುದರ ಬಗ್ಗೆ ತಪ್ಪು ಕಲ್ಪನೆಯಿದೆ. ಈ ಕಲ್ಪನೆಯನ್ನು ಹೋಗಲಾಡಿಸಿ,ಬ 18ರಿಂದ 50 ವರ್ಷದವರನ್ನು ರಕ್ತದಾನ ಮಾಡುವಂತೆ ಪ್ರೇರೆಪಿಸುವುದು ನಮ್ಮ ಮುಖ್ಯ ಉದ್ದೇಶ ಎಂದರು.

ಶಿಬಿರದಲ್ಲಿ ಡಾ.ಜೀನು, ಎಸ್.ಬಿ. ಪಾಟೀಲ, ವೆಂಕಟೇಶ ಡಿ., ವಿರೂಪಾಕ್ಷಯ್ಯ ಹಿರೇಮಠ, ಮಂಜುನಾಥ ಕರಿಯನಗೌಡ್ರ, ಲಾವಣ್ಯ ಆರ್, ಶರಣು ಗಾಣಗೇರ ಮುಂತಾದವರಿದ್ದರು

# ದಾಸರ ಪದಗಳು ಸಾರ್ಥಕ ಬದುಕಿನ ದೀವಿಗೆ

■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ವಿದ್ಯಾದಾನ ಸಮಿತಿಯ ಕನ್ನಡ ಪ್ರಾಥಮಿಕ ಶಾಲೆಯಲ್ಲಿ ಭಕ್ತ ಕನಕದಾಸರ ಜಯಂತಿಯನ್ನು ಆಚರಿಸಲಾಯಿತು. ಸಂಸ್ಥೆಯ ಆಡಳಿತ ಅಧಿಕಾರಿ ವಾದಿರಾಜ ಕಾತೋಟೆ ಹಾಗೂ ಮುಖ್ಯೋಪಾಧ್ಯಾಯ ಎಂ.ವಿ. ಹವಲ್ದಾರ ಕನಕದಾಸರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ವಾದಿರಾಜ ಕಾತೋಟೆ ಮಾತನಾಡಿ, ಸೌಹಾರ್ದತೆ, ಸಮಾನತೆ, ಆಧ್ಯಾತ್ಮಿಕ ಸಾಧನೆಗಳ ಕುರಿತು ಕನಕದಾಸರ ತತ್ವೋಪದೇಶಗಳು




ಚಿರಂತನವಾಗಿದ್ದು, ಸಾರ್ಥಕ ಬದುಕಿಗೆ ದಾರಿದೀಪವಾಗಿವೆ ಎಂದರು.

ಎಂ.ವಿ. ಹವಲ್ದಾರ ಮಾತನಾಡಿ, ಕನಕದಾಸರು ತಮ್ಮ ಕೀರ್ತನೆಗಳಲ್ಲೊಂದಾದ ಬಾಗಿಲನು ತೆರೆದು ಸೇವೆಯನ್ನು ಕೊಡು ಹರಿಯೇ ಎಂಬ ಭಕ್ತಿ ಪೂರ್ವಕ ಕೀರ್ತನೆಯ ಮುಖಾಂತರ ಉಡುಪಿಯ ಶ್ರೀಕೃಷ್ಣ ಪರಮಾತ್ಮನ ದರುಶನ ಪಡೆದುಕೊಂಡು ಎಂದು ದಾಸರ ಚರಿತ್ರೆಯನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು.

ಹಿರಿಯ ಶಿಕ್ಷಕ ಆರ್.ಡಿ. ಪಡೆಸೂರ ಕನಕದಾಸರ ಜೀವನ ಮತ್ತು ಸಂಗೀತ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳ ಕುರಿತು ಸಮಗ್ರ ಮಾಹಿತಿ ತಿಳಿಸಿದರು. ಶಿಕ್ಷಕಿಯರಾದ ಎಂ.ಎನ್. ಹುಬ್ಬಳ್ಳಿ, ಭುವನೇಶ್ವರಿ ಕೋರಿ ಮಾತನಾಡಿದರು. ಕಾವೇರಿ ಲಮಾಣಿ ಸ್ವಾಗತಿಸಿದರು. ಜೆ.ಎಸ್. ಪುರಮಶೆಟ್ಟಿ ನಿರೂಪಿಸಿದರು. ಮಹೇಶ ಬ್ಯಾಳಿ ವಂದಿಸಿದರು.

# ಶ್ರೀ ಜ.ಶಿವಾನಂದ ಕಾಲೇಜಿನಲ್ಲಿ ಕನಕದಾಸ ಜಯಂತಿ ಆಚರಣೆ

■ವಿಜಯಸಾಕ್ಷಿ ಸುದ್ದಿ, ಗದಗ

ಸಂತ ಕನಕದಾಸರು ಅಮೂಲ್ಯ ಕೀರ್ತನೆಗಳನ್ನು ರಚಿಸಿದ್ದು, ಅವು ಮಾನವ ಕುಲಕ್ಕೆ ದಾರಿ ದೀಪವಾಗಿವೆ. ಅವರ ರಚನೆಗಳು ಇಂದಿಗೂ ಜನಮನದಲ್ಲಿ ಮಾಸದೇ ಉಳಿದಿವೆ. ಎಲ್ಲರೂ ಅವರ ಮಾರ್ಗದರ್ಶನದಲ್ಲಿ ಮುನ್ನಡೆಯಿರಿ ಎಂದು ಪ್ರಾಂಶುಪಾಲ ಎಸ್.ವ್ಹಿ. ವೆರ್ಣೇಕರ ನುಡಿದರು.

ಇಲ್ಲಿನ ಜ.ಶಿವಾನಂದ ಪ.ಪೂ ವಿಜ್ಞಾನ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಕನಕದಾಸ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.



ವಿದ್ಯಾರ್ಥಿಗಳಾದ ಹಾಲಮ್ಮ ದುರಗದ, ಮಲ್ಲಮ್ಮ ಬಿಂಗಿ ಕನಕದಾಸರ ಕೀರ್ತನೆಯನ್ನು ವಿವರಿಸಿದರು. ಉಪನ್ಯಾಸಕರಾದ ಎಂ.ಪಿ. ಮಂಟೂರ, ಎಸ್.ಬಿ. ಹಿರೇಮಠ ದಾಸ ಸಾಹಿತ್ಯದ ಕುರಿತು ಮಾತನಾಡಿದರು. ಲಕ್ಷ್ಮೀ ಹಾಗೂ ಸರಸ್ವತಿ ಯಲಿ ಪ್ರಾರ್ಥಿಸಿದರು. ಶ್ರೀದೇವಿ ಜಂಗಮನಿ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಉಪನ್ಯಾಸಕಿ ಪ್ರಿಯಾಂಕ ಪಾಟೀಲ ವಂದಿಸಿದರು.

# ಕನಕದಾಸರು ಮನುಕುಲಕ್ಕೆ ದಾರಿದೀಪ



■ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ಶ್ರೀರಾಮ ಸೇನಾ ಹಾಗೂ ಆಟೋ ಸೇನಾ ಗದಗ ಜಿಲ್ಲಾ ವತಿಯಿಂದ ಕನಕದಾಸರ ಜಯಂತಿಯನ್ನು ಆಚರಿಸಲಾಯಿತು.

ಶ್ರೀರಾಮ ಸೇನಾ ರಾಜ್ಯ ಕಾರ್ಯದರ್ಶಿ ರಾಜು ಖಾನಪ್ಪನವರ ಮಾತನಾಡಿ, ಕನಕದಾಸರು ದಾಸ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಜ್ಞಾನ, ಭಕ್ತಿ ವೈರಾಗ್ಯಗಳ ಸಾಹಿತ್ಯಕ್ಕೆ ತಮ್ಮದೇ ಆದ ಅಪಾರ ಕೊಡುಗೆಯನ್ನು ನೀಡಿ, ಮನುಕುಲಕ್ಕೆ ದಾರಿ ದೀಪವಾಗಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಶ್ರೀರಾಮ ಸೇನಾ ಜಿಲ್ಲಾಧ್ಯಕ್ಷ ಸೋಮು ಗುಡಿ, ಆಟೋ ಸೇನಾ ಜಿಲ್ಲಾಧ್ಯಕ್ಷ ಮಹಾಬಲೇಶ್ವರ ಶೆಟ್ಟರ, ಉಪಾಧ್ಯಕ್ಷ ಗುರುರಾಜ ಮರಾಠಿ, ಮೌನೇಶ ದಾಸರ್, ವಿರೇಶ ಬಿರ್ಲದಿನ್ನಿ, ಮಂಜುನಾಥ ಪೂಜಾರಿ, ಶಶಿ ಧರ್ಗಟ್ಟಿ, ಸಂತೋಷ ಜಗದೀಶ ಹಿರೇಮಠ, ಹರೀಶ ಹಡಪದ, ಹುಲಿಗೆಪ್ಪ ವಾಲ್ಮೀಕಿ, ಗಂಗಪ್ಪ ಬಿಜಾಪೂರ, ಸತೀಶ ಕುಂಬಾರ, ಅನಿಲ್ ಮುಳ್ಳಾಳ ಹಾಗೂ ಕಾರ್ಯಕರ್ತರು ಪಾಲ್ಗೊಂಡಿದ್ದರು.

# ಕನಕದಾಸರ ತತ್ವಾದರ್ಶಗಳ ಅನುಕರುಣೆಯಾಗಲಿ

■ವಿಜಯಸಾಕ್ಷಿ ಸುದ್ದಿ, ಗದಗ

ಕನಕದಾಸರು ಈ ದೇಶದ ದಾಸ ಪರಂಪರೆಯಲ್ಲಿ ಮೂಡಿ ಬಂದ ಮಹಾನ್ ಸಂತರು. ಅವರು ಸಮಾಜದ ಓರೆ-ಕೋರೆಗಳನ್ನು ತಮ್ಮ ಅಂತರಂಗದ ವಿಶಾಲ ದೃಷ್ಟಿಕೋನದಿಂದ ಸೂಕ್ಷ್ಮವಾಗಿ ಗ್ರಹಿಸಿ, ಅದನ್ನು ತಿದ್ದಿ, ಸಾಮಾಜಿಕ ಸಮಾನತೆ ಸಾಧಿಸಿದ ದಾರ್ಶನಿಕರಾಗಿದ್ದಾರೆ. ಇಂತಹ ಮಹಾನುಭಾವರ ಜೀವನ ಬರೀ ಆಚರಣೆಗೆ ಸಿಮಿತವಾಗದೆ ಅನುಕರಣೆಯಾಗಿ ಮಾರ್ಪಡಲಿ. ಅದೇ ನಾವು ಅವರಿಗೆ ಕೊಡುವ ಬಹು ದೊಡ್ಡ ಗೌರವವಾಗುತ್ತದೆಂದು ಪ್ರಾ. ಬಿ.ಬಿ. ಗೌಡರ ನುಡಿದರು.

ಕಲ್ಯಾಣಸಿರಿ ಫೌಂಡೇಶನ್,




ಕಲ್ಯಾಣಸಿರಿ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಮತ್ತು ಕಲ್ಯಾಣಸಿರಿ ಕೌಶಲ್ಯ ತರಬೇತಿ ಕೇಂದ್ರ ಗದಗ ಇವುಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಕನಕದಾಸರ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕನಕದಾಸರು ಸಮಾಜವನ್ನು ತಲುಪುವಲ್ಲಿ ಜನರೊಂದಿಗೆ ಬೆರೆತು, ಆಡುಭಾಷೆಯಲ್ಲಿ ಸರಳವಾದ ವಿಚಾರಗಳನ್ನು ಮನಮುಟ್ಟುವಂತೆ ಸಾರಿದ ತತ್ವೋಪದೇಶಗಳು ಅವರನ್ನು ದಾಸ ಶ್ರೇಷ್ಠರನ್ನಾಗಿಸಿತು ಎಂದರು.

ಪ್ರೊ. ರೇಣುಕಾ ನವಲಗುಂದ, ಪ್ರೊ. ಸಂತೋಷ ಡೋಣಿ, ಪ್ರೊ. ಮಾರುತಿ ಶಿರುಂದ ಕನಕದಾಸರ ಕುರಿತು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಪ್ರೊ. ಶಶಿಕಲಾ ಉಮ್ಮಣ್ಣವರ ಸ್ವಾಗತ ಕೋರಿದರು.

ಪ್ರೊ. ಎಮ್.ಹೆಚ್. ಕುರಿ ನಿರೂಪಿಸಿದರು. ಪ್ರೊ. ಅಶ್ವಿನಿ ಮಠಾಣಿ ವಂದಿಸಿದರು.

### ದಿ.ಡಾ. ಈಶ್ವರಪ್ಪ ರೇವಡಿ ಪ್ರತಿಷ್ಠಾನದ ಉದ್ಘಾಟನೆ, ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮ

# ಶಿಕ್ಷಣ ದೇಶವನ್ನು ಬಲಿಷ್ಠಗೊಳಿಸುವ ದೊಡ್ಡ ಶಕ್ತಿ




■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಕನ್ನಡ ಮನಸ್ಸುಗಳು ಹಾಗೂ ಬಸವ ಪ್ರಕಾಶನದಿಂದ ಕನ್ನಡ ರಾಜ್ಯೋತ್ಸವ ಆಚರಣೆ, ದಿ.ಡಾ. ಈಶ್ವರಪ್ಪ ರೇವಡಿ ಪ್ರತಿಷ್ಠಾನದ ಉದ್ಘಾಟನೆ ಹಾಗೂ ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮ ಪಟ್ಟಣದ ಮೈಸೂರು ಮಠದಲ್ಲಿ ಗುರುವಾರ ನಡೆಯಿತು.

ಪ್ರಾಸ್ತಾವಿಕವಾಗಿ ಎಂ.ಎಸ್. ಮಕಾನದಾರ ಮಾತನಾಡಿ, ಶಿಕ್ಷಣ, ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳ ಮೂಲಕ ಸಮಾಜವನ್ನು ಒಗ್ಗೂಡಿಸಿದ

ದಿ. ಈಶ್ವರಪ್ಪ ರೇವಡಿ ಪ್ರತಿಷ್ಠಾನದ ಆಶಯಗಳ ಕುರಿತು ನಿವೃತ್ತ ಶಿಕ್ಷಕ ಕೆ.ಜಿ. ಸಂಗಟಿ ಮಾತನಾಡಿದರೆ, ಸಾಹಿತಿ ಎ.ಎಸ್. ಮಕಾನದಾರ 'ಭುವನೇಶ್ವರಿಯ ತೇರು ಎಳೆದವರು' ಪುಸ್ತಕದ ಕುರಿತು ಮಾತನಾಡಿದರು.

ಕೈಂಕರ್ಯವನ್ನು ಈಶ್ವರಪ್ಪ ರೇವಡಿ ಕೈಗೊಂಡಿದ್ದರು. ಅಲ್ಲದೆ ಕಸಾಪ ಅಧ್ಯಕ್ಷರಾಗಿ, ಶಿಕ್ಷಕರಾಗಿ ಹಲವು ಪ್ರಥಮಗಳಿಗೆ ಮುನ್ನುಡಿ ಬರೆದಿದ್ದರು ಎಂದು ಸ್ಮರಿಸಿದರು.

ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಎಂ.ಎ. ರೇಡ್ಡರ ಮಾತನಾಡಿ, ಈಶ್ವರಪ್ಪ ರೇವಡಿ ಅವರು ಶಿಕ್ಷಕರಾಗಿ, ಸಮಾಜಮುಖಿ ನಾಯಕರಾಗಿ ಕೈಗೊಂಡ ಸಾಮಾಜಿಕ ಕಾರ್ಯಕ್ರಮಗಳು ಸಮಾಜವನ್ನು ಸಶಕ್ತಗೊಳಿಸಲು ಪೂರಕವಾಗಿದ್ದವು. ಅವರ ಆಶಯಕ್ಕೆ ಪೂರಕವಾಗಿ ಪ್ರತಿಷ್ಠಾನ ಉದ್ಘಾಟನೆಗೊಂಡಿರುವುದು ಖುಷಿ ತಂದಿದೆ. ಶಿಕ್ಷಣವು ದೇಶವನ್ನು ಬಲಿಷ್ಠಗೊಳಿಸುವ ದೊಡ್ಡ ಶಕ್ತಿಯಾಗಿದೆ. ಪ್ರತಿಷ್ಠಾನದ ಮೂಲಕ ಶಾಲೆಗಳನ್ನು ದತ್ತು ತೆಗೆದುಕೊಳ್ಳಲು ಮುಂದಾದರೆ ಈಶ್ವರಪ್ಪ ರೇವಡಿ ಅವರ ಕನಸು ನನಸಾಗುತ್ತದೆ ಎಂದರು.

ಕಾರ್ಯಕ್ರಮದ ಸಾನ್ನಿಧ್ಯವನ್ನು ಮೈಸೂರ ಮಠದ ವಿಜಯಮಹಾಂತ ಸ್ವಾಮೀಜಿ ವಹಿಸಿದ್ದರು. ಕದಳಿ ಮಹಿಳಾ ವೇದಿಕೆಯ ಅಧ್ಯಕ್ಷೆ ಮಂಜುಳಾ ರೇವಡಿ ಅಧ್ಯಕ್ಷತೆ ವಹಿಸಿದ್ದರು. ರೋಣ ಪುರಸಭೆ ಉಪಾಧ್ಯಕ್ಷ ಮಿಥುನ ಪಾಟೀಲ, ಬಸವರಾಜ ಅಂಗಡಿ, ಬಿ.ಎಂ. ಸಜ್ಜನರ, ಶರಣಪ್ಪ ರೇವಡಿ, ಸಿದ್ದಪ್ಪ ಬಂಡಿ, ಅಶೋಕ ಬಾಗಮಾರ, ಎ.ಪಿ. ಗಾಣಿಗೇರ, ಶಿವರಾಜ ಘೋರ್ಪಡೆ, ಎಚ್.ಎಸ್. ಸೋಂಪುರ, ಉಮೇಶ ರಾಠೋಡ, ವಿ.ಜಿ. ಶೆಟ್ಟರ, ಎ.ಡಿ. ಕೋಲಕಾರ, ಬಸವರಾಜ ಕೊಟಗಿ, ರಾಜು ಸಾಂಗ್ಲೀಕರ, ಎಸ್.ಎಸ್. ವಾಲಿ, ಅಪ್ಪು ಮತ್ತಿಕಟ್ಟಿ, ಅಮರೇಶಪ್ಪ ಬೂದಿಹಾಳ, ಎ.ಕೆ. ಒಂಟಿ, ಎನ್.ಎಸ್. ಸವಣೂರ, ಎಸ್.ಐ. ಪತ್ತಾರ, ಎಸ್.ಎಸ್. ನರೇಗಲ್ ಮುಂತಾದವರು ಉಪಸ್ಥಿತರಿದ್ದರು

# ಪತಂಜಲಿ ಯೋಗ ಸಮಿತಿಯಿಂದ ಕನಕದಾಸ ಜಯಂತಿ ಆಚರಣೆ



■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಮುನ್ಸಿಪಲ್ ಕಾಲೇಜು ಮೈದಾನದಲ್ಲಿ ಪತಂಜಲಿ ಯೋಗ ಸಮಿತಿಯಿಂದ ಕನಕದಾಸ ಜಯಂತಿ ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಗಿರಿಯಪ್ಪ ಮಡಿವಾಳರ, ಮಹಿಳಾ ಪತಂಜಲಿ ಯೋಗ ಸಮಿತಿ ಗದಗ ಜಿಲ್ಲಾಧ್ಯಕ್ಷೆ ಶೋಭಾ ಗುಗ್ಗರಿ, ಆಂಜನೇಶ ಮಾನೆ ಸಾಂದರ್ಭಿಕವಾಗಿ ಮಾತನಾಡಿದರು. ಬಸವರಾಜ ಹಿರೇಮಠ, ತಿಪ್ಪಕ್ಕ ಖಾನಾಪೂರ, ರವಿ ಬೆಂಗಳೂರು ಕನಕದಾಸರ ರಚನೆಗಳನ್ನು ಹಾಡಿದರು.

ಕಾರ್ಯಕ್ರಮದಲ್ಲಿ ಬೇಲಿ, ಅಪ್ಪಣ್ಣ ಮಠದ, ದೇಸಾಯಿ ಪಟ್ಟಿ, ನಾಗರತ್ನ ಕಲ್ಲೂರ, ಸುಧಾ ಚಳ್ಳಮರದ, ಲತಾ ಮಾನೆ, ಶ್ರೀಮತಿ ಯಂಡಿಗೇರಿ, ಶ್ರೀಮತಿ ಭಜಂತ್ರಿ ಸೇರಿದಂತೆ ಪತಂಜಲಿ ಯೋಗ ಸಮಿತಿಯ ಎಲ್ಲ ಸದಸ್ಯರು ಪಾಲ್ಗೊಂಡಿದ್ದರು. ಲಕ್ಷ್ಮೀ ಗುರಿಕಾರ ವಂದಿಸಿದರು.

## 97 ತೇಜಸ್ ಯುದ್ಧ ವಿಮಾನ, 156 ಪ್ರಚಂಡ ಹೆಲಿಕಾಪ್ಟರ್ ಖರೀದಿಗೆ ಕೇಂದ್ರ ಅನುಮೋದನೆ

■ವಿಜಯಸಾಕ್ಷಿ ಸುದ್ದಿ, ನವದೆಹಲಿ

ಸಶಸ್ತ್ರ ಪಡೆಗಳ ಒಟ್ಟಾರೆ ಯುದ್ಧ ಸಾಮರ್ಥ್ಯವನ್ನು ಮತ್ತಷ್ಟು ಹೆಚ್ಚಿಸಲು 97 ತೇಜಸ್ ಲಘು ಯುದ್ಧ ವಿಮಾನಗಳು ಮತ್ತು ಸುಮಾರು 156 ಪ್ರಚಂಡ್ ಹೆಲಿಕಾಪ್ಟರ್‌ಗಳನ್ನುಖರೀದಿಸಲು ಕೇಂದ್ರ ಸರ್ಕಾರ ಗುರುವಾರ ಆರಂಭಿಕ ಅನುಮೋದನೆಯನ್ನು ನೀಡಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ನೇತೃತ್ವದ



ಡಿಫೆನ್ಸ್ ಅಕ್ವಿಸಿಷನ್ ಕೌನ್ಸಿಲ್(ಡಿಎಸಿ) ಭಾರತೀಯ ವಾಯುಪಡೆಯ ಎಸ್‌ಯು –30 ಫೈಟರ್ ಫ್ಲೀಟ್ ಅನ್ನು ಮೇಲ್ದರ್ಜೆಗೆ ಏರಿಸುವ ಪ್ರಸ್ತಾಪವನ್ನು ಸಹ ಅಂಗೀಕರಿಸಿದೆ ಎಂದು ಮೂಲಗಳು ತಿಳಿಸಿವೆ.

97 ತೇಜಸ್ ಯುದ್ಧ ವಿಮಾನ, 156 ಪ್ರಚಂಡ ಹೆಲಿಕಾಪ್ಟರ್ ಖರೀದಿ ಯೋಜನೆ ಹಾಗೂ ಎಸ್ ಯು-30 ಅಪ್‌ಗ್ರೇಡ್ ಯೋಜನೆಗೆ 1.6 ಲಕ್ಷ ಕೋಟಿ ರೂಪಾಯಿ ಖರ್ಚಾಗುವ ಸಾಧ್ಯತೆ ಇದೆ ಎಂದು ಅಂದಾಜಿಸಲಾಗಿದೆ. ರಕ್ಷಣಾ ಸಚಿವಾಲಯವು, ಡಿಎಸಿಯಿಂದ ಅನುಮತಿ ಪಡೆದ ಯೋಜನೆಗಳ ವಿವರಗಳನ್ನು ಶೀಘ್ರದಲ್ಲೇ ಬಿಡುಗಡೆ ಮಾಡುವ ನಿರೀಕ್ಷೆಯಿದೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka